MAA ಫ್ರೆಂಡ್ಸ್ ಸಾರಥ್ಯದಲ್ಲಿ...

# ಯುವ ಮಾರ್ಗ

ಕನ್ನಡ ದಿನಪತ್ರಿಕೆ "ಇದು ರಾಷ್ಟ್ರದ ಧ್ವನಿ"

ಸಂಪಾದಕರು : ಅನಿಲ ಕುಮಾರ್ ಹೆಚ್ Cell : 9743497111
ಪ್ರಧಾನ ಸಂಪಾದಕರು : ಮನೋಜ ಮಿಶ್ರಾ Cell : 9743496111

YUVA MARGA KANNADA DAILY NEWS PAPER

ಸಂಪುಟ: 04 | ಸಂಚಿಕೆ: 282 | ಮಂಗಳವಾರ : 26-08-2025 | ರಾಯಚೂರು | RNI NO: KARKAN/2022/90446 | ಪುಟ: 4 | ಬೆಲೆ: ರೂ: 2-00

VOLUME: 04 | ISSUE: 282 | TUESDAY : 26-08-2025 | RAICHUR | EMAIL: YUVAMARGA@GMAIL.COM | PAGE: 4 | PRICE: Rs: 2-00

## ಬಸವ ಸಂಸ್ಕೃತಿ ಅಭಿಯಾನ ಯಶಸ್ವಿಗೊಳಿಸಲು ಕರೆ




**ಯುವ ಮಾರ್ಗ ಸುದ್ದಿ**

**ಮಾನ್ವಿ,ಆ.25–** ಸಾಂಸ್ಕೃತಿಕ ನಾಯಕ ಬಸವಣ್ಣನವರ ಕಾಯಕ ಮತ್ತು ದಾಸೋಹ ತತ್ವಗಳು ಶ್ರೇಷ್ಠ ಮತ್ತು ಅನುಕರಣೀಯ ಅವರ ತತ್ವಗಳನ್ನು ನಾವೆಲ್ಲರು ಪಾಲಿಸಬೇಕು ಎಂದು ಚೀಕಲಪರ್ವಿಯ ರುದ್ರಮುನೀಶ್ವರ ಮಠದ ಸದಾಶಿವ ಸ್ವಾಮೀಗಳು ಹೇಳಿದರು.

ಪಟ್ಟಣದ ಬಿವಿಆರ್ ಶಾಲೆ ಆವರಣದಲ್ಲಿ ಭಾನುವಾರ ಹಮ್ಮಿಕೊಳ್ಳಲಾಗಿದ್ದ ಬಸವ ಸಂಸ್ಕೃತಿ ಅಭಿಯಾನದ ಪೂರ್ವಭಾವಿ ಸಭೆಯಲ್ಲಿ ಅವರು ಮಾತನಾಡಿದರು. ರಾಜ್ಯ ಸರ್ಕಾರ ಬಸವಣ್ಣನವರಿಗೆ ಸಾಂಸ್ಕೃತಿಕ ನಾಯಕ ಎಂದು ಗುರುತಿಸಿರುವ ಹಿನ್ನೆಲೆಯಲ್ಲಿ ಸೆ.5 ರಂದು ರಾಯಚೂರಿನಲ್ಲಿ ನಡೆಯುವ ಬಸವ ಸಂಸ್ಕೃತಿ ಅಭಿಯಾನ ಕಾರ್ಯಕ್ರಮದಲ್ಲಿ ಬಸವಾಭಿಮಾನಿಗಳು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಯಶಸ್ವಿಗೊಳಿಸಬೇಕು ಎಂದರು.ಸಿರುಗುಪ್ಪ ಆಹಾರ ಇಲಾಖೆ ಮೇಲ್ವಿಚಾರಕಿ ಅಮರೇಶ್ವರಿ ಬೆಟ್ಟದೂರು **(2ನೇಪುಟಕ್ಕೆ)**

## ಅಕ್ರಮವಾಗಿ ಮದ್ಯ ಸರಬರಾಜಾದರೆ ಕಠಿಣ ಕಾನೂನು ಕ್ರಮ : ಇನ್ಸ್ಪೆಕ್ಟರ್ ಲಕ್ಷ್ಮೀದೇವಿ

**ಯುವ ಮಾರ್ಗ ಸುದ್ದಿ**

**ಲಿಂಗಸುಗೂರು,ಆ.25–**ಗಣೇಶ ಹಬ್ಬ ಹಿಂದೂಗಳ ಪಾಲಿನ ಪ್ರಮುಖ ಹಬ್ಬವಾಗಿದೆ, ಅದೇ ರೀತಿ ಈದ್ ಮಿಲಾದ್ ಹಬ್ಬವು ಇಸ್ಲಾಂ ಧರ್ಮದ ಪ್ರಮುಖ ಹಬ್ಬ, ಈ ಎರಡು ಹಬ್ಬಗಳಲ್ಲಿ ಯಾವುದ ಮದ್ಯ ಅಕ್ರಮವಾಗಿ ಸರಬರಾಜು ಆದರೆ ನಾನು ಸಹಿಸಲು ಸಾಧ್ಯವಿಲ್ಲಾ, ಅಂತವರ ವಿರುದ್ಧ ಕಾನೂನು ಕ್ರಮ ಗ್ಯಾರಂಟಿ ಎಂದು ಅಬಕಾರಿ ಇನ್ಸ್ಪೆಕ್ಟರ್ ಲಕ್ಷ್ಮಿ ದೇವಿ ಕಟ್ಟುನಿಟ್ಟಾಗಿ ಸೂಚನೆ ನೀಡಿದರು.

ಪಟ್ಟಣದ ಅಬಕಾರಿ ಕಛೇರಿಯಲ್ಲಿ ನಡೆದ ಸಭೆಯಲ್ಲಿ ಮಾತನಾಡಿದ ಅವರು, ಹಬ್ಬದ ಸಂದರ್ಭದಲ್ಲಿ ಯಾವುದೇ ಅಕ್ರಮ ಮದ್ಯ ಸರಬರಜು ಮಾಡದಂತೆ ಹಾಗೂ ಸನ್ನದು ಷರತ್ತುಗಳು ಹಾಗೂ ನಿಯಮಗಳನ್ನು ಪಾಲಿಸಲು ಲಿಂಗಸುಗೂರು ವಲಯದ ಮಸ್ಕಿ ಮುದುಗಲ್ ಹಟ್ಟಿ



ಲಿಂಗಸೂಗೂರಿನ ಎಲ್ಲಾ ಸನ್ನದುದಾರರರಿಗೆ ಕಟ್ಟುನಿಟ್ಟಿನ ಎಚ್ಚರಿಕೆ ನೀಡಿದರು.

ಹಬ್ಬದ ಡ್ರೈ ಡೇ ದಿನದಂದು ನಮ್ಮ ವಲಯದಲ್ಲಿ ಬರುವ ಎಲ್ಲಾ ಬಾರ್ ಗಳನ್ನು ಬಂದ್ ಮಾಡಿಸಲಾಗುವುದು ಹಾಗೂ ಹಳ್ಳಿಗಳಲ್ಲಿ ಅಕ್ರಮವಾಗಿ ಮದ್ಯ ಮಾರಾಟ ಕಂಡು ಬಂದರೆ ಅಂತಹವರ ವಿರುದ್ಧ ಸೂಕ್ತ ಕ್ರಮ ಕೈಗೊಳ್ಳಲಾಗುವುದೆಂದು ಎಚ್ಚರಿಕೆ ನೀಡಿದರು.

ಈ ಸಂದರ್ಭದಲ್ಲಿ ಸಂಬಂಧ ಪಟ್ಟ ಅಧಿಕಾರಿಗಳು, ಬಾರ್ ಅಂಗಡಿಯ ಮಾಲೀಕರು ಸೇರಿದಂತೆ ಇದ್ದರು.

## ಒಂದು ವಾರದ ಆಕಾಂಕ್ಷ ಹಾತ್ ಕಾರ್ಯಕ್ರಮಕ್ಕೆ ವಿದ್ಯುಕ್ತ ಚಾಲನೆ

**ಯುವ ಮಾರ್ಗ ಸುದ್ದಿ**

**ರಾಯಚೂರು,ಆ.25–**ನಗರದ ಹಳೆಯ ಜಿಲ್ಲಾಧಿಕಾರಿಗಳ ಕಚೇರಿಯ ಹತ್ತಿರದ ಟಿಪ್ಪು ಸುಲ್ತಾನ್ ಉದ್ಯಾನವನದಲ್ಲಿ ಆಗಸ್ಟ್ 25ರಂದು ಹಬ್ಬದ ಸಂಭ್ರಮ ಕಾಣುತ್ತಿದೆ. ಸ್ಥಳೀಯ ಸಾಂಪ್ರದಾಯಿಕ ಉತ್ಪನ್ನಗಳನ್ನು ಉತ್ತೇಜಿಸುವ ಆಕಾಂಕ್ಷ ಹಾತ್ ಕಾರ್ಯಕ್ರಮದಡಿ ಉದ್ಯಾನವನದಲ್ಲಿ ಸುಮಾರು 23 ಸ್ಟಾಲ್‌ಗಳನ್ನು ಹಾಕಲಾಗಿದ್ದು, ಬಗೆಬಗೆಯ ಉತ್ಪನ್ನಗಳ ಪ್ರದರ್ಶನ ಮತ್ತು ಮಾರಾಟ ಜನಮನ ಸೆಳೆಯುತ್ತಿದೆ.

ಮೊದಲ ದಿನ ಬೆಳಗ್ಗೆಯಿಂದ ಸಂಜೆ ವೇಳೆಗೆ ಸುಮಾರು 2500ಕ್ಕೂ ಹೆಚ್ಚು ಜನರು ವೀಕ್ಷಣೆ ಮಾಡಿದ್ದು ಈ ಕಾರ್ಯಕ್ರಮದ ವಿಶೇಷತೆಯಾಗಿದೆ.

ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ರಾಯಚೂರು ಮಹಾನಗರ ಪಾಲಿಕೆ ಹಾಗೂ ಜಿಲ್ಲಾ ಕೌಶಲ್ಯ ಮಿಷನ್ ಸಂಯುಕ್ತಾಶ್ರಯದಲ್ಲಿ ಜಿಲ್ಲೆಯ ಮಹತ್ವಾಕಾಂಕ್ಷೆ ಮತ್ತು ಮಹತ್ವಾಕಾಂಕ್ಷೆ ತಾಲೂಕು ಕಾರ್ಯಕ್ರಮದಡಿ ಹಮ್ಮಿಕೊಂಡ ಕಾರ್ಯಕ್ರಮಕ್ಕೆ ಅಪರ ಜಿಲ್ಲಾಧಿಕಾರಿಗಳಾದ ಶಿವಾನಂದ ಭಜಂತ್ರಿ ಅವರು ಚಾಲನೆ ನೀಡಿದರು.

ಈ ವೇಳೆ ಮಾತನಾಡಿದ ಅಪರ ಜಿಲ್ಲಾಧಿಕಾರಿಗಳು, ದೇಶದ ಆರ್ಥಿಕತೆಯಲ್ಲಿ ಹಾಗೂ ಸದೃಢ ದೇಶ ನಿರ್ಮಾಣದಲ್ಲಿ ಮಹಿಳೆಯರ ಪಾತ್ರ ಪ್ರಮುಖವಾಗಿದೆ. ಮಹಿಳೆಯರು ಮನೆಯಲ್ಲಿ ಉತ್ಪಾದನೆ ಮಾಡಿದ ದೇಶಿ ಮತ್ತು ಸಾಂಪ್ರದಾಯಿಕ ಉತ್ಪನ್ನಗಳನ್ನು ಪ್ರೋತ್ಸಾಹಿಸಬೇಕೆಂದರು.






ಮಹಿಳೆಯರು ತಮ್ಮ ಮನೆಯಲ್ಲಿನ ಡಬ್ಬಿಗಳಲ್ಲಿ ಕೂಡಿಡುವ ಅಲ್ಪ ಹಣವೇ ಅವರಿಗೆ ಅವಶ್ಯಕ ಸಂದರ್ಭದಲ್ಲಿ ಸಹಾಯಕ ಬರುತ್ತದೆ.

ಮಹಿಳೆಯರು ಕೆಲ ಪದಾರ್ಥಗಳನ್ನು ಮನೆಯಲ್ಲಿಯೇ ತಯಾರಿಸಿ ಮಾರಾಟ ಮಾಡಿದಲ್ಲಿ ಕುಟುಂಬ ನಡೆಸಲು ಅನುಕೂಲವಾಗುತ್ತದೆ. ಮನೆಯಲ್ಲಿ ತಯಾರಿಸಿದ ಉತ್ಪನ್ನಗಳಿಗೆ ಮಾರುಕಟ್ಟೆ ವ್ಯವಸ್ಥೆ ಇಲ್ಲದೇ ಬೇರೆಯವರಿಗೆ ತಲುಪಿಸಲು ಸಾಧ್ಯವಾಗುವುದಿಲ್ಲ ಎನ್ನುವ ಕೊರಗು ಇದೆ. ಇಂತಹ ಮೇಳಗಳ ಮೂಲಕ ತಮ್ಮ ಉತ್ಪನ್ನಗಳನ್ನು ಪರಿಚಯಿಸಿ ಬ್ರ್ಯಾಂಡ್ ಮಾಡಿಕೊಂಡು ಹೆಸರುವಾಸಿಯಾಗಬೇಕು ಎಂದರು.

ಇಂದಿನಿಂದ ಆಗಸ್ಟ್ 30ರವರೆಗೆ ಸುಮಾರು ಒಂದು ವಾರಗಳ ಕಾಲ ನಡೆಯುವ ಮೇಳದಲ್ಲಿ ತಮ್ಮ ಉತ್ಪನ್ನಗಳನ್ನು ಮಾರಾಟ ಮಾಡಿ ಹೆಚ್ಚು ಗ್ರಾಹಕರನ್ನು ಸೆಳೆಯಬೇಕು. ತಮ್ಮ ಉತ್ಪನ್ನಗಳನ್ನು ಪರಿಚಯಿಸಿ ಮಾರಾಟ ಮಾಡಿ ಆರ್ಥಿಕ ಸ್ವಾವಲಂಬಿಗಳಾಗಿ ಮತ್ತೊಬ್ಬರಿಗೆ ಮಾದರಿಯಾಗಬೇಕು. ಸ್ವಯಂ ಉದ್ಯಮಿಗಳಾಗಬೇಕು ಎಂದು ಸಲಹೆ ಮಾಡಿದರು.

ಈ ವೇಳೆ ಮಹಾನಗರ ಪಾಲಿಕೆಯ ಆಡಳಿತ ವಿಭಾಗದ ಉಪ ಆಯುಕ್ತರಾದ ಸಂತೋಷ್ ರಾಣಿ ಅವರು ಮಾತನಾಡಿ, ದೇಶದ ಶೇ.60ರಷ್ಟು ಆರ್ಥಿಕ ಶಕ್ತಿಯು ಅದು ಮನೆಮನೆಗಳಿಂದಲೇ ಸಾಧ್ಯಾಗುತ್ತಿದೆ. ಮನೆಯಲ್ಲಿಯೇ ಉತ್ಪಾದನೆ ಮಾಡುವ ಉತ್ಪನ್ನಗಳಿಗೆ ಬ್ರ್ಯಾಂಡ್ ಇಲ್ಲದೇ ಇರುವುದರಿಂದ ಮಾರಾಟ ವ್ಯವಸ್ಥೆ ಸವಾಲಿನಂತಾಗಿರುತ್ತದೆ.

ಉತ್ಪನ್ನಕ್ಕೆ ಒಂದು ಹೆಸರು ಕೊಟ್ಟು ಇಂತಹ **(2ನೇಪುಟಕ್ಕೆ)**

## ಕೋಮು, ಗಲಭೆ ಸೃಷ್ಟಿಸಿದರೆ ಕ್ರಮ: ಪಿಐ ಮಂಜುನಾಥ ಸೂಚನೆ

**ಯುವ ಮಾರ್ಗ ಸುದ್ದಿ**

**ಅರಕೇರಾ,ಆ.25–** ಸಂಪ್ರದಾಯಗಳನ್ನು ಉಳಿಸಿ, ಬೆಳೆಸಲು ಹಬ್ಬ ಹರಿದಿನಗಳನ್ನು ಆಚರಿಸಬೇಕು. ಆದರೆ ಜಾತಿ, ಧರ್ಮ, ವೈಯಕ್ತಿಕ ಸೇರಿ ಅನ್ಯ ಉದ್ದೇಶಗಳಿಂದ ಕೋಮು ಗಲಭೆಗಳನ್ನು ಸೃಷ್ಠಿಸಿದರೆ ಕಾನೂನು ಕ್ರಮ ಕೈಗೊಳ್ಳಲಾಗುವುದು ಎಂದು ಪಿಐ ಮಂಜುನಾಥ ಹೇಳಿದರು. ಪಟ್ಟಣದ ಚಾವಡಿ ಕಟ್ಟೆಯಲ್ಲಿ ಗೌರಿ ಗಣೇಶ ಹಾಗೂ ಈದ್ ಮಿಲಾದ್ ಹಬ್ಬದ ಪ್ರಯುಕ್ತ ಪೋಲಿಸ್ ಇಲಾಖೆಯಿಂದ ಹಮ್ಮಿಕೊಂಡಿದ್ದ ಶಾಂತಿ ಪಾಲನಾ ಸಭೆ ಉದ್ದೇಶಿಸಿ ಭಾನುವಾರ ಮಾತನಾಡಿದರು. ಎಲ್ಲಿ ದ್ವೇಷ, ಅಸೂಯೆಗಳು ಇರುತ್ತವೆ ಅಲ್ಲಿ ಕೋಮು, ಗಲಾಭೆಗಳು ಉಂಟಾಗುತ್ತವೆ. ಹಬ್ಬಗಳು ಧಾರ್ಮಿಕ ಆಚರಣೆಯ ಸಂಕೇತ. ಅಲ್ಲಿ ಪಾವಿತ್ಯತೆಯನ್ನು ಮೆರೆಯಬೇಕು. ಗಣೇಶ ಪ್ರತಿಷ್ಠಾಪನೆ ಮಾಡುವವರು




ಜಾಗದ ಮಾಲೀಕರ ಅಥವಾ ಗ್ರಾಪಂ ಅನುಮತಿ ಪಡೆದಿರಬೇಕು. ಶಬ್ಧ ಮಾಲಿನ್ಯವಾಗುವ ಡಿಜೆ ಬಳಸುವಂತಿಲ್ಲ. ಮದ್ಯ ಸೇವಿಸಿ ಹುಚ್ಚಾಟ ಮೆರೆಯುವಂತಿಲ್ಲ. ಸರ್ಕಾರದ ಮಾರ್ಗಸೂಚಿಯನ್ನು ತಪ್ಪದೇ ಪಾಲಿಸಬೇಕು. ಕಾನೂನು ಮೀರಿ ಚಟುವಟಿಕೆಗಳನ್ನು ನಡೆಸಿದವರು ಕ್ರಿಮಿನಲ್ ಶಿಕ್ಷೆಗೆ ಗುರಿಯಾಗಬೇಕಾಗುತ್ತದೆ ಎಂದು ಸೂಚಿಸಿದರು.

ಹಿರಿಯ ಮನೆತನದವರಾದ ರಾಕೇಶ ನಾಯಕ ಪೊಲೀಸ್ ಪಾಟೀಲ್ ಮಾತನಾಡಿ, ಹಿಂದು, ಮುಸ್ಲಿಂ ಜನಾಂಗದವರು ಮೊದಲಿನಂದಲೂ ಭಾವೈಕ್ಯದಿಂದ ನೆಲೆಸಿದ್ದಾರೆ. ಸರ್ಕಾರದ ಸಲಹೆ ಸೂಚನೆ ಪಾಲಿಸಲು ಬದ್ಧರಾಗಿದ್ದೇವೆ ಎಂದರು. ಪ್ರಮುಖರಾದ ರಾಕೇಶ ನಾಯಕ ಪೊಲೀಸ್ ಪಾಟೀಲ್, ಶೇಖರಪ್ಪ ಗೌಡ ಮಾ.ಪಾ, ರಾಚಯ್ಯ ಸ್ವಾಮಿ ಮಠಪತಿ, ಹುಸೇನ್ ಭಾಷಾ, ಸಾಜೀದ್ ಅನ್ವರ್, ಇಬ್ರಾಹೀಂ ಸಾಬ ಹಟ್ಟಿ, ಅಗ್ನಿ ಶಾಮಕ ಸಿಬ್ಬಂದಿ ಹನುಮೇಶ, ಪೊಲೀಸ್ ಪೇದೆಗಳಾದ ಮಹೇಶ, ವಿರೇಶ, ನಾಗರಾಜ ನಾಯಕ, ಹನುಮಂತ ಇತರರಿದ್ದರು.

## ಪತ್ರಕರ್ತರನ್ನು ನಿಂದಿಸಿದ ಪ್ರಾಂಶುಪಾಲ ಸುರೇಶ ವರ್ಮಾ ಅಮಾನತ್ತಿಗೆ ಮಾನ್ವಿ ಪತ್ರಕರ್ತರ ಸಂಘ ಆಗ್ರಹ

**ಯುವ ಮಾರ್ಗ ಸುದ್ದಿ**

**ಮಾನ್ವಿ,ಆ.25–** ಪತ್ರಕರ್ತರಿಗೆ ಅವಾಚ್ಯ ಶಬ್ದಗ 'ಳಿಂದ ನಿಂದಿಸಿದ ಕೊತ್ತದೊಡ್ಡಿ ಏಕಲವ್ಯ ವಸತಿ ಶಾಲೆಯ ಪ್ರಾಂಶುಪಾಲ ಸುರೇಶ ವರ್ಮಾ ಇವರನ್ನು ಸೇವೆಯಿಂದ ಅಮಾ ನತ್ತುಗೊಳಿಸಲು

ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘ ಮಾನ್ವಿ ತಾಲೂಕ ಘಟಕ ಆಗ್ರಹಿಸಿದೆ. ತಹಸೀಲ್ದಾರ ಮೂಲಕ ಜಿಲ್ಲಾಧಿಕಾರಿಗೆ ನೀಡಿರುವ ಮನವಿಯಲ್ಲಿ ಅರಕೇರಿ ಸಮೀಪದ ಕೊತ್ತದೊಡ್ಡಿ ವಸತಿ ಶಾಲೆಯಲ್ಲಿ ಅನಾರೋಗ್ಯಕ್ಕೆ ತುತ್ತಾದ ವಿದ್ಯಾರ್ಥಿಗಳನ್ನು ಅರಕೇರ ಪಟ್ಟಣದ ಸಮುದಾಯ ಆರೋಗ್ಯ ಕೇಂದ್ರದಲ್ಲಿ ತಪಾಸಣೆಗೆ ಕರೆತರಲಾಗಿತ್ತು. ಈ ಸಂದರ್ಭದಲ್ಲಿ ಪತ್ರಕರ್ತರು ವಿಡಿಯೋ, ಫೋಟೋ ಚಿತ್ರೀಕರಣ ಮಾಡುತ್ತಿರುವಾಗ ಜವಾಬ್ದಾರಿಯುತ ಸ್ಥಾನದಲ್ಲಿದ್ದ ಪ್ರಿನ್ಸಿಪಾಲ್ ಸುರೇಶ ವರ್ಮಾ ಮಾಹಿತಿ ಮತ್ತು ಚಿತ್ರ ಸಂಗ್ರಹಿಸಿದ



ಮಾಧ್ಯಮದವರೊಂದಿಗೆ ಅನುಚಿತವಾಗಿ ವರ್ತಿಸಿ ನಿಂದಿಸಿರುವುದು ತೀವ್ರ ಖಂಡನೀಯ. ಪತ್ರಕರ್ತರು ವಸತಿ ಶಾಲೆಯ ಮಕ್ಕಳ ಹಿತದೃಷ್ಟಿಯಿಂದ ಮಾಹಿತಿ ಪಡೆಯಲು ಹೋಗಿದ್ದು ತಪ್ಪಾ ಜವಾಬ್ದಾರಿಯುತ ಸ್ಥಾನದಲ್ಲಿರುವ ಪ್ರಿನ್ಸಿಪಾಲ್ ಸಂವಿಧಾನದ ನಾಲ್ಕನೇ ಅಂಗದಲ್ಲಿ ನಿಷ್ಪಕ್ಷಪಾತವಾಗಿ, ನಿಷ್ಠುರವಾದಿಯಾಗಿ ಸೇವೆಗೈಯುವವರಿಗೆ ಅಗೌರವ ತೋರಿದ್ದಾರೆ. ಹೀಗಾದರೆ ಪತ್ರಕರ್ತರು ಸಮಾಜದಲ್ಲಿ ಸ್ವತಂತ್ರವಾಗಿ ವರದಿಗಾರಿಕೆ ಮಾಡುವುದು ಹೇಗೆ ಸಾಧ್ಯವಾಗುತ್ತದೆ. ಇಂತಹ ಬೇಜವಬ್ದಾರಿಯುತ ಅಧಿಕಾರಿಗಳಿಂದ ಪತ್ರಕರ್ತರ ಮೇಲೆ ನಿರಂತರ ಅಪಮಾನಗಳು ನಡೆಯುತ್ತಿವೆ. ಇದರಿಂದ ಪತ್ರಕರ್ತರು ಮಾನಸಿಕವಾಗಿ ನೊಂದಿದ್ದಾರೆ. ಇಡೀ ಮಾಧ್ಯಮ ಕ್ಷೇತ್ರವನ್ನು ಮನಬಂದಂತೆ ಹೀಯಾಳಿಸಿ ಪತ್ರಕರ್ತ ರೊಂದಿಗೆ ಅನುಚಿತವಾಗಿ ವರ್ತಿಸಿ, ಅವಾಚ್ಯ ಶಬ್ದಗಳಿಂದ ನಿಂದಿಸಿದ ಕೊತ್ತದೊಡ್ಡಿ ಏಕಲವ್ಯ ವಸತಿ ಶಾಲೆಯ ಪ್ರಾಂಶುಪಾಲನನ್ನು

## ಡಸ್ಟಬಿನ್ ಅಳವಡಿಕೆ ಕಾರ್ಯಕ್ರಮಕ್ಕೆ ಶಾಸಕ ಡಾ.ಶಿವರಾಜ ಎಸ್.ಪಾಟೀಲ ಚಾಲನೆ

**ಯುವ ಮಾರ್ಗ ಸುದ್ದಿ**

**ರಾಯಚೂರು,ಆ.25–**ಬ್ಲಾಕ್ ಸ್ಪಾಟ್‌ಗಳನ್ನು ಕಡಿಮೆ ಮಾಡಲು ಮತ್ತು ಸ್ವಚ್ಛತೆ ಕಾಪಾಡಲು ರಾಯಚೂರು ನಗರದಾದ್ಯಂತ ಕಸದ ಡಬ್ಬಿ ಇಡುವುದನ್ನು ಸುವ್ಯವಸ್ಥಿತವಾಗಿ ಮಾಡಲಾಗುವುದು ಎಂದು ರಾಯಚೂರು ನಗರ ಕ್ಷೇತ್ರದ ಶಾಸಕರಾದ ಡಾ.ಎಸ್ ಶಿವರಾಜ ಪಾಟೀಲ ಅವರು ಹೇಳಿದರು.

650 ಲೀಟರ್ ಸಾಮರ್ಥ್ಯದ 72 ಕಸದ ಡಸ್ಟಬಿನಗಳನ್ನು ಅಳವಡಿಸಲು, ನಗರದ ಹಳೆಯ ಜಿಲ್ಲಾಧಿಕಾರಿಗಳ ಕಚೇರಿಯ ಆವರಣದಲ್ಲಿನ ರಾಯಚೂರು ಮಹಾನಗರ ಪಾಲಿಕೆಯ ಕಚೇರಿ ಸಭಾಂಗಣದಲ್ಲಿ ಆಗಸ್ಟ್ 25ರಂದು ನಡೆದ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಅವರು ಮಾತನಾಡಿದರು.

ರಾಯಚೂರು ನಗರವು ಸುಂದರವಾಗಿ ಕಾಣಬೇಕು ಎಂಬುದು ನಮ್ಮ ಉದ್ದೇಶವಾಗಿದೆ. ಈ ನಿಟ್ಟಿನಲ್ಲಿ ಮಹಾನಗರ ಪಾಲಿಕೆಯು ನಗರದಲ್ಲಿ ಬ್ಲಾಕ್ ಸ್ಪಾಟ್‌ಗಳನ್ನು ಕಡಿಮೆ ಮಾಡಲು ಮತ್ತು ಸ್ವಚ್ಛತೆ ಕಾಪಾಡಲು ನಗರದಾದ್ಯಂತ ಕಸದ ಡಬ್ಬಿ




ಇಡಲಾಗುತ್ತಿದೆ ಎಂದರು.

ಖಾಸಗಿಯವರ ಸಹಭಾಗೀತ್ವದಲ್ಲಿ ಪ್ರತಿಷ್ಠಿತ ಶಿಲ್ಪಾ ಮೆಡಿಕೇರ್ ಲಿಮಿಟೆಡ್ ಮತ್ತು ಶಿಲ್ಪಾ ಫೌಂಡೇಶನ್ ದಿಂದ 10 ಲಕ್ಷ ರೂಪಾಯಿ ಮತ್ತು ಐ.ಎಂ.ಎ ಅವರು 10 ಲಕ್ಷ ರೂಪಾಯಿ ಸ್ವಚ್ಛ ನಗರಕ್ಕಾಗಿ ದೇಣಿಗೆ ನೀಡಿರುವುದು ಶ್ಲಾಘನೀಯ ಕಾರ್ಯವಾಗಿದೆ ಎಂದು ಶಾಸಕರು ತಿಳಿಸಿದರು.

ಪಾಲಿಕೆಯ ಹಿರಿಯ ಸದಸ್ಯರಾದ ಜಯಣ್ಣ ಅವರು ಮಾತನಾಡಿ, ಸಾರ್ವಜನಿಕರ ಸಹಮತ ಮತ್ತು ಸಹಕಾರವಿಲ್ಲದೆ ಯಾವ ಯೋಜನೆಯು ಯಶಸ್ವಿಯಾಗಲು ಸಾಧ್ಯವಿಲ್ಲ. ಹಾಗಾಗಿ ಈ ಕಾರ್ಯಕ್ರಮಕ್ಕೆ ಎಲ್ಲರೂ ಸಹಕಾರ ನೀಡಬೇಕು ಎಂದು ಕೋರಿದರು.

ಶಿಲ್ಪಾ ಮೆಡಿಕೇರ್ ಲಿಮಿಟೆಡ್ ಮತ್ತು ಶಿಲ್ಪಾ ಫೌಂಡೇಶನ್ನಿನ ವ್ಯವಸ್ಥಾಪಕ ನಿರ್ದೇಶಕರು ಹಾಗೂ ಟ್ರಸ್ಟಿ ವಿಷ್ಣುಕಾಂತ ಅವರು ಮಾತನಾಡಿ, ನಗರದ ಪ್ರಜೆಯಾಗಿ ನಗರದ ಸರ್ವಾಂಗೀಣ ಅಭಿವೃದ್ಧಿಗೆ ಯಾವಾಗಲು ನಾವು ಸಿದ್ದರಿದ್ದೇವೆ. ಮಹಾನಗರದಲ್ಲಿ ಹಾಕುವ ಡಸ್ಟಬಿನಗಳು ಸದುಪಯೋಗವಾಗಬೇಕು ಎಂದು ಮನವಿ ಮಾಡಿದರು.

ಈ ಸಂದರ್ಭದಲ್ಲಿ ಮಹಾಪೌರರಾದ ನರಸಮ್ಮ ನರಸಿಂಹಲು ಮಾಡಿಗಿರಿ, ಮಹಾನಗರ ಪಾಲಿಕೆಯ ಆಯುಕ್ತರಾದ ಜುಬಿನ್ ಮೊಹಪಾತ್ರ, ಹಿರಿಯ ಸದಸ್ಯರಾದ ಜಯಣ್ಣ, ಜಿಂದಪ್ಪ, ಶಶಿರಾಜ ಎನ್ ಕೆ. ನಾಗರಾಜ ಹಾಗೂ ಇನ್ನಿತರರು ಉಪಸ್ಥಿತರಿದ್ದರು.

## ಮೊದಲನೇಯ ಪುಟದಿಂದ

# ಬಸವ ಸಂಸ್ಕೃತಿ ಅಭಿಯಾನ ಯಶಸ್ವಿಗೊಳಿಸಲು ಕರೆ

ಮಾತನಾಡಿ ಬಸವಣ್ಣವರು ಮಹಿಳೆಯರಿಗೆ ಉನ್ನತ ಸ್ಥಾನ ನೀಡಿ ಅವರನ್ನು ಧಾರ್ಮಿಕ ಕ್ಷೇತ್ರದಲ್ಲಿ ಸಮಾನತೆ ನೀಡಿದರು. ವಚನಕಾರರನ್ನಾಗಿ ಮಾಡಿದರು, ಅಂದು ಅನುಭವ ಮಂಟಪದಲ್ಲಿ ಮಹಿಳೆಯರಿಗೆ ಶೇ. 33 ರಷ್ಟು ಸಮಾನತೆ ನೀಡಿದರು ಎಂದರು.

ಕಲ್ಮಠದ ವಿರೂಪಾಕ್ಷ ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮೀಗಳು, ವೀರಶೈವ ಲಿಂಗಾಯತ ಸಮಾಜದ ಅಧ್ಯಕ್ಷ ಹರಿಹರ ಪಾಟೀಲ, ಮಲ್ಲಿಕಾರ್ಜುನ ಸಿರಗುಪ್ಪ ಮಾತನಾಡಿದರು. ಜಾಗತಿಕ ಲಿಂಗಾಯತ ಮಹಾಸಭಾದ ಅಧ್ಯಕ್ಷ ಮಲ್ಲಿಕಾರ್ಜುನ ಪಾಟೀಲ ಚಿಮ್ಲಾಪುರ, ಬಸವ ಕೇಂದ್ರದ ಅಧ್ಯಕ್ಷ ರಂಗಪ್ಪ ಜಿ.ಎಂ, ಗೌರವಾಧ್ಯಕ್ಷ ಬಸವಪ್ರಭು ಪಾಟೀಲ ಬೆಟ್ಟದೂರು, ಶರಣಬಸವ ಬೆಟ್ಟದೂರು, ಇನ್ನಿತರರು ಇದ್ದರು.

# ಒಂದು ವಾರದ ಆಕಾಂಕ್ಷ ಹಾತ್ ಕಾರ್ಯಕ್ರಮಕ್ಕೆ ವಿದ್ಯುಕ್ತ ಚಾಲನೆ

ಮೇಳದಲ್ಲಿ ಪರಿಚಯಿಸಬೇಕು. ಮಹಿಳೆಯರು ಉತ್ತಮ ಅಡುಗೆ ಕೌಶಲ್ಯ ಬೆಳೆಸಿಕೊಂಡು ಸಾಂಪ್ರದಾಯಿಕ ರೀತಿಯಲ್ಲಿ ಮಾಡಿದಲ್ಲಿ ಉತ್ತಮ ರೀತಿಯ ಮಾರುಕಟ್ಟೆ ಸಿಕ್ಕು ಸ್ವಾವಲಂಬಿಗಳಾಗಿ ಆರ್ಥಿಕ ಸದೃಢರಾಗಲು ಸಾಧ್ಯವೆಂದರು.

ಈ ವೇಳೆ ಜಿಲ್ಲಾ ಪಂಚಾಯತ ಯೋಜನಾ ನಿರ್ದೇಶಕರಾದ ಡಾ.ಟಿ.ರೋಣಿ ಅವರು ಮಾತನಾಡಿ, ದೇಶದಲ್ಲಿನ ಮಹತ್ವಾಕಾಂಕ್ಷೆ ಜಿಲ್ಲೆಗಳಲ್ಲಿ ಸ್ಥಳೀಯ ಮತ್ತು ಸಾಂಪ್ರದಾಯಿಕ ಉತ್ಪನ್ನಗಳಿಗೆ ಪ್ರೋತ್ಸಾಹ ನೀಡುವ ನಿಟ್ಟಿನಲ್ಲಿ ಮೇಳಗಳನ್ನು ನೀತಿ ಆಯೋಗದ ಮೂಲಕ ನಡೆಸಲಾಗುತ್ತಿದೆ. ಒಂದು ವಾರಗಳ ಕಾಲ ನಡೆಯುವ ಈ ಮೇಳದಲ್ಲಿ ಸ್ವ-ಸಹಾಯ ಗುಂಪುಗಳಿಂದ ತಯಾರಿಸಿದ ಸ್ಥಳೀಯ ಉತ್ಪನ್ನಗಳನ್ನು ಮಾರಾಟ ಮಾಡಿ ಸ್ವಾವಲಂಬಿಗಳಾಗಿ ಜೀವನ ನಡೆಸಲು ಸಾಧ್ಯವಾಗುತ್ತದೆ ಎಂದರು.

ಗ್ರಾಮೀಣ ಮಟ್ಟದಲ್ಲಿನ ಉತ್ಪನ್ನಗಳಿಗೆ ಮಾರುಕಟ್ಟೆ ವ್ಯವಸ್ಥೆಯಿಲ್ಲ. ಒಂದು ವೇದಿಕೆ ಮೂಲಕ ಅವುಗಳನ್ನು ಪರಿಚಯಿಸುವ ಮೂಲಕ ಸ್ಥಳೀಯ ಉತ್ಪನ್ನಗಳ ಮಾರಾಟ ಮಾಡಲು ಅವಕಾಶ ದೊರೆತಿದೆ. ಮಹಿಳೆಯರು ಶ್ರಮವಹಿಸಿ ತಯಾರಿಸಿದ ಉತ್ಪನ್ನಗಳನ್ನು ಮಾರಾಟ ಮಾಡಿ ಸ್ವಯಂ ಉದ್ಯೋಗಿಗಳಬೇಕೆಂದರು.

ಇದೇ ಸಂದರ್ಭದಲ್ಲಿ ಜಿಲ್ಲಾ ಕೌಶಲ್ಯಾಧಿಕಾರಿ ಜಿ.ಯು.ಹುಡೇದ್, ಉದ್ಯೋಗ ವಿನಿಮಯ ಅಧಿಕಾರಿ ನವೀನ್ ಕುಮಾರ, ಸ್ವ-ಸಹಾಯ ಗುಂಪುಗಳ ತಾಲೂಕು ಅಧ್ಯಕ್ಷೆ ಲಲಿತಾ ಸೇರಿದಂತೆ ವಿವಿಧ ಇಲಾಖೆಯ ಅಧಿಕಾರಿಗಳು, ಸ್ವ-ಸಹಾಯ ಗುಂಪುಗಳ ಮಹಿಳೆಯರು ಮೇಳದಲ್ಲಿ ಭಾಗವಹಿಸಿದ್ದರು.

# ಪ್ರಾಂಶುಪಾಲ ಸುರೇಶ ವರ್ಮಾ ಅಮಾನತ್ತಿಗೆ ಮಾನ್ವಿ ಪತ್ರಕರ್ತರ ಸಂಘ ಆಗ್ರಹ

ಕೂಡಲೇ ಸೇವೆಯಿಂದ ಅಮಾನತ್ತು ಗೊಳಿಸಬೇಕೆಂದು ಒತ್ತಾಯಿಸಿದರು. ಈ ಸಂದರ್ಭದಲ್ಲಿ ಪತ್ರಕರ್ತರ ಸಂಘದ ಜಿಲ್ಲಾ ಉಪಾಧ್ಯಕ್ಷ ಪಿ.ಪರಮೇಶ, ಜಿಲ್ಲಾ ಕಾರ್ಯದರ್ಶಿ ಶರಣಬಸವ ನೀರಮಾನ್ವಿ, ಪತ್ರಕರ್ತರ ಸಂಘದ ತಾಲೂಕ ಅಧ್ಯಕ್ಷ ಮಾರೆಪ್ಪ ದೊಡ್ಡಮನಿ, ಹಿರಿಯ ಪತ್ರಕರ್ತ ಹನುಮಂತಪ್ಪ ಕೊಟ್ನೆಕಲ್, ಎಂ.ಬಿ.ಸಿದ್ರಾಮಯ್ಯಸ್ವಾಮಿ, ಕೃಷ್ಣಮೂರ್ತಿ ಗುಡಿ, ನಾಗರಾಜ ತಡಕಲ್, ಎಸ್.ಎ.ಗಯಾಸ್, ರಾಜಶೇಖರ, ಬಸವರಾಜ ತಡಕಲ್, ಜೀತೇಂದ್ರಸ್ವಾಮಿ, ಶಿವಕುಮಾರ ಜಗ್ಲಿ, ಚಂದ್ರಶೇಖರ ಮದ್ಲಾಪುರ, ಅಜಮತ್ ಖಾನ್, ಕಿರಣಕುಮಾರ ತಡಕಲ್, ವಿಜಯಕುಮಾರ, ಅಕ್ಷಯಕುಮಾರ. ಗೋವಿಂದರಾಜು,ಮೈನುದ್ದೀನ್, ಜಲಾಲ್ ಶಾಸ್ತ್ರಿ ಕ್ಯಾಂಪ್, ಶಿವಕುಮಾರ ಸಜ್ಜನ್ ಸೇರಿದಂತೆ ಅನೇಕ ಪತ್ರಕರ್ತರು ಭಾಗವಹಿಸಿದ್ದರು.

# ದಾದಿ ಪ್ರಕಾಶಮಣಿ ಸ್ಮರಣಾರ್ಥ: ಬಿ.ಕೆ ಶಿವಶಕ್ತಿ ಭವನದಲ್ಲಿ ರಕ್ತದಾನ ಶಿಬಿರ



**ಬೀದರ್,ಅ.25–** ರಾಜಯೋಗಿನಿ ದಾದಿ ಪ್ರಕಾಶಮಣಿಯವರ 18ನೇ ಸ್ಮರಣಾರ್ಥ ನಗರದ ರಾಂಪುರೇ ಕಾಲೊನಿಯ ಬ್ರಹ್ಮಾಕುಮಾರಿ "ಶಿವಶಕ್ತಿ ಭವನ"*ದಲ್ಲಿ ಸೋಮವಾರ ಬೆಳಿಗ್ಗೆ 10ರಿಂದ ಸಂಜೆ 5ರ ವರೆಗೆ ವಿಶ್ವ ಬಂಧುತ್ವ ದಿನಾಚರಣೆ ಹಾಗೂ ಮಹಾ ರಕ್ತದಾನ ಶಿಬಿರ ಆಯೋಜಿಸಲಾಯಿತು.

ಕಾರ್ಯಕ್ರಮದಲ್ಲಿ ಬ್ರಹ್ಮಾಕುಮಾರೀಸ್ ಕೇಂದ್ರದ ಸಂಚಾಲಕಿ ಬಿ.ಕೆ. ಸುನಂದಾ ಬೆಹೆನ್‌ಜಿ ಅವರು ಮಾತನಾಡಿ, ದಾದಿ ಪ್ರಕಾಶಮಣಿಯವರ ಜೀವನ, ಸೇವಾ ಚಟುವಟಿಕೆಗಳು ಹಾಗೂ ವಿಶ್ವಮಟ್ಟದಲ್ಲಿ ಬ್ರಹ್ಮಾಕುಮಾರೀಸ್ ಸಂಸ್ಥೆಯ ವಿಸ್ತರಣೆಯ ಕುರಿತು ಸ್ಮರಿಸಿದ್ದರು. ಅವರು 1922ರಲ್ಲಿ ಜನಿಸಿದ್ದು, 1969ರಲ್ಲಿ ಬ್ರಹ್ಮಾ ಬಾಬಾ ಅವರು ತಮ್ಮ ಶಕ್ತಿಯನ್ನು ದಾದಿ ಪ್ರಕಾಶಮಣಿಗೆ ಅರ್ಪಿಸಿದ ನಂತರ ಜಗತ್ತಿನಾದ್ಯಂತ ಸೇವಾಕಾರ್ಯದಲ್ಲಿ ಅವರು ಅಜರಾಮರರಾಗಿದ್ದರು ಎಂದು ಹೇಳಿದರು.

ಜಗತ್ತಿನ 140ಕ್ಕೂ ಹೆಚ್ಚು ದೇಶಗಳಲ್ಲಿ ಇಂದು ಸುಮಾರು 50 ಸಾವಿರ ಬಿ.ಕೆ. ಸಹೋದರಿಯರು ಹಾಗೂ 5,000ಕ್ಕೂ ಅಧಿಕ ಸಹೋದರರು ನಿಸ್ವಾರ್ಥ ಸೇವೆಯಲ್ಲಿ ನಿರತರಾಗಿದ್ದಾರೆಂದು ವಿವರಿಸಿದರು. ಈ ತಿಂಗಳ 22ರಿಂದ 25ರ ವರೆಗೆ ಭಾರತ ಹಾಗೂ ನೇಪಾಳದ 6,000ಕ್ಕೂ ಹೆಚ್ಚು ಕೇಂದ್ರಗಳಲ್ಲಿ ಮಹಾ ರಕ್ತದಾನ ಅಭಿಯಾನ ನಡೆಯುತ್ತಿರುವುದನ್ನು ತಿಳಿಸಿದರು.

ಕಾರ್ಯಕ್ರಮದಲ್ಲಿ ತೆಲಂಗಾಣ ಸಂಗಾರೆಡ್ಡಿ ಬ್ರಹ್ಮಾಕುಮಾರಿ ಕೇಂದ್ರದ ರೆಡ್ಡಿ ಸಂಚಾಲಕಿ ಬಿ.ಕೆ. ಸುಮಂಗಲಾ ಬಹೆನಜಿ ಅವರು ಮಾತನಾಡಿ ಸಂಗಾರೆಡ್ಡಿಯಲ್ಲಿ ಬ್ರಹ್ಮಾ ಬಾಬಾ ಅವರ ಕೇಂದ್ರ ನಿರ್ಮಾಣ ಮಾಡಬೇಕಿತ್ತು ತಮ್ಮ ಶುಭ ಕಾಮನೆ ಬೇಕೆಂದು ಕೇಳಿದಾಗ ಖಂಡಿತ್ತಾ ಆಗುತ್ತದೆ ಎಂದು ಭರವಸೆ ನೀಡಿದ್ದರು, ಅವರ ದೈವಿ ಶಕ್ತಿಯಿಂದ ಸಂಗಾರೆಡ್ಡಿಯಲ್ಲಿ ಬ್ರಹ್ಮಾಕುಮಾರಿ ಕೇಂದ್ರ ಸ್ಥಾಪನೆ ಜೋತೆಗೆ ಬೀದರ ತಾಲೂಕಿನ ಯೆದಲಾಪೂರ ಗ್ರಾಮದ ಹತ್ತಿರ ಸುಮಾರ 15 ಎಕರೆ ಜಮಿನಿನಲ್ಲಿ ವಿಸ್ತಾರವಾಗಿ ನಿರ್ಮಾಣಗೊಳ್ಳುತ್ತಿರುವ ರಿಟ್ರೀಟ್ ಕೇಂದ್ರ ಸ್ಥಾಪನೆ ಆಗಲು ದಾದಿಯವರ ದಿವ್ಯ ಶಕ್ತಿ ಗುಲ್ಜಾರ ದಾದಿ ಹಾಗೂ ಜಾನಕಿ ದಾದಿಯವರ ಪ್ರೇರಣಾ ಶಕ್ತಿಯಿಂದ ಸಾದ್ಯವಾಯಿತು ಎಂದು ತಿಳಿಸಿದ್ದರು.

ಕಾರ್ಯಕ್ರಮದಲ್ಲಿ ಬುಡಾ ಅಧ್ಯಕ್ಷ ಬಸವರಾಜಟ್ಟಿ, ಬೀದರ್ ವಾಣಿಜ್ಯ ಮತ್ತು ಕೈಗಾರಿಕಾ ಸಂಸ್ಥೆಯ ಅಧ್ಯಕ್ಷ ಬಿ.ಜಿ. ಶೆಟ್ಕರ್, ಉದ್ಯಮಿ ರಮೇಶ್ ಗೋಯಲ್, ಡಾ. ನಾಗೇಶ್ ಪಾಟೀಲ್, ಬಿ.ವಿ. ಬೋಮರೆಡ್ಡಿ ಕಾಲೇಜಿನ ಪ್ರಾಚಾರ್ಯ ಡಾ. ಪಿ. ವಿಟ್ಠಲ್ ರೆಡ್ಡಿ, ಹಿರಿಯ ಪತ್ರಕರ್ತ ಶಿವಶರಣಪ್ಪಾ ವಾಲಿ, ಶಿವಕುಮಾರ ಸ್ವಾಮಿ, ಆದೀಶ ವಾಲಿ, ಪ್ರಭೂಶೆಟ್ಟಿ, ಕಾಶಿನಾಥ ಕೊಂಡಾ, ಬಾಪೂ ರೆಡ್ಡಿ ಹಾಗೂ ಅನೇಕರು ಉಪಧ್ಥಿತರಿದ್ದರು.

ಈ ಸಂದರ್ಭದಲ್ಲಿ ಹಲವರು ರಕ್ತದಾನ ಮಾಡಿದ್ದರು, ರಕ್ತದಾನ ಮಾಡಿದವರಿಗೆ ಪ್ರಮಾಣ ಪತ್ರ ವಿತರಿಸಲಾಯಿತು.

ಕೇಂದ್ರದ ಹಿರಿಯ ರಾಜಯೊಗ ಶಿಕ್ಷಕಿ ಬಿ.ಕೆ.ಪಾರ್ವತಿ ಸ್ವಾಗತಿಸಿ ಕಾರ್ಯಕ್ರಮ ನಿರೂಪಿಸಿದ್ದರು.

# ಸಂಭಾವಿತ ಗುಣಗಳ ಮೂಲಕ ರಾಜಕೀಯ ನಾಯಕರಾಗಿ ಬೆಳೆದ ಎ.ವೆಂಕಟೇಶ ನಾಯಕ



**ಯುವ ಮಾರ್ಗ ಸುದ್ದಿ**

**ಅರಕೇರಾ,ಆ.25–**ದಿವಂಗತ ಎ.ವೆಂಕಟೇಶ ನಾಯಕರು ಎಲ್ಲರ ಮನಸ್ಸಿನಲ್ಲಿ ಅಚ್ಚಳಿಯದೆ ಉಳಿದ ಮಹಾ ಪುರುಷ ಸರಳ ವ್ಯಕ್ತಿತ್ವದ ಮೂಲಕ ಜಿಲ್ಲಾದ್ಯಂತ ಗಮನಸೆಳೆದವರು. ಎಂದು ಜಿ.ಪಂ.ಮಾಜಿ ಸದಸ್ಯ ಸತ್ಯನಾರಾಯಣ ನಾಯಕ ಪೊ.ಪಾ .ಹೇಳಿದರು.

ಸಮೀಪದ ಜುಟಮರಡಿ ಗ್ರಾಮದಲ್ಲಿ 11 ನೇ ವರ್ಷದ ಪುಣ್ಯ ಸ್ಮರಣಾರ್ಥ ಅಂಗವಾಗಿ ರವಿವಾರ ಅವರ ಕಂಚಿನ ಪುತ್ಥಳಿಗೆ ಪುಷ್ಪ ನಮನ ಸಲ್ಲಿಸಿ ಮಾತನಾಡಿದ ಅವರು, ಪಂಚಾಯಿತಿಯಿಂದ ಪಾರ್ಲಿಮೆಂಟ್ ಗೆ ಹೋಗಿ ಬಂದ ಅವರ ಹತ್ತಿರಕ್ಕೆ ಅಧಿಕಾರದ ಅಹಂ ಸುಳಿಯಲಿಲ್ಲ. ಸರಳ, ಸಂಭಾವಿತ ಗುಣಗಳ ಮೂಲಕ ರಾಜಕೀಯ ನಾಯಕರಾಗಿ ಬೆಳೆಯಲು ಸಾಧ್ಯವೆಂದು ಅವರು ತೋರಿಸಿಕೊಟ್ಟರು. ಅವರ ಆದರ್ಶ ಗುಣಗಳು ಸರ್ವಕಾಲಕ್ಕೂ ಪ್ರಸ್ತುತ ಎಂದು ಹೇಳಿದರು. ಬೆಳಿಗ್ಗೆಯಿಂದ ಕುಟುಂಬದ ಸದಸ್ಯರು ಮಾಜಿ ಸಂಸದ, ಶಾಸಕ 'ರಾಗಿದ್ದ ದಿವಂಗತ ಎ.ವೆಂಕಟೇಶ ನಾಯಕ ಅವರ ಪುತ್ಥಳಿಗೆ ವಿಶೇಷ ಪೂಜೆ ಪುನಸ್ಕಾರ ಸಲ್ಲಿಸಿದರು.

ಈ ವೇಳೆ ಮಾಜಿ ಲೋಕಸಭಾ ಸದಸ್ಯ ಬಿ.ವಿ.ನಾಯಕ, ಆರ್.ಡಿಸಿಸಿ ಬ್ಯಾಂಕ್ ನಿರ್ದೇಶಕ ಎ.ರಾಜಶೇಖರ ನಾಯಕ, ಚನ್ನವೀರಯ್ಯ ಸ್ವಾಮಿ, ಹಿರೇಮಠ, ಗಂಗಪ್ಪಯ್ಯ ಪೂಜಾರಿ, ವೆಂಕಟೇಶ ನಾಯಕ ದೊರೆ, ಸೀತಣ್ಣ ನಾಯಕ ಗುರಿಕಾರ, ಬಸವರಾಜ ಪೂಜಾರಿ, ಶರಣಗೌಡ ಗಣೇಕಲ್, ರಾಚಣ್ಣ ಅಬ ಕಾರಿ, ಕೊಟ್ರೇಶಪ್ಪ ಕೊರಿ, ಬಸವಾರಜ ಮಾ.ಪಾ, ಬಸವರಾಜ ಕ್ವಾಟೆ ದೊರೆ, ಜಿ. ಬುದೆಪ್ಪ ಸಾಹುಕರ, ಮಲ್ಲಿಕಾರ್ಜುನ ಸಾಹು ಕಾರ ಗುಡಿ, ದುರುಗಪ್ಪ ನಾಯಕ, ಜಾವೀದ್ ಆರ್.ಚಿಂಚೋಳಿ ಕರ್, ಸಿದ್ದಾರ್ಥ ಹವಾಲ್ದಾರ್, ಸಾಬಣ್ಣ ಹೂಗಾರ, ಮಲ್ಲಯ್ಯ ಮದರಕಲ್ ಸೇರಿದಂತೆ ಸುತ್ತಲಿನ ಗ್ರಾಮಸ್ಥರು ಅಭಿಮಾನಿಗಳು ಹಾಗೂ ಕಾರ್ಯಕರ್ತರು ಇದ್ದರು.

# ಮೋಘಾ (ಕೆ): ಪತ್ತಿನ ಸಂಘದ ಚುನಾವಣೆ ಗುತ್ತೇದಾರ ಬೆಂಬಲಿಗರ ಮೆಲುಗೈ

**ಯುವ ಮಾರ್ಗ ಸುದ್ದಿ**

**ಆಳಂದ,ಆ.25–** ತಾಲೂಕಿನ ಮೋಘಾ (ಕೆ) ಗ್ರಾಮದ ಕೃಷಿ ಪತ್ತಿನ ಸಹಕಾರ ಸಂಘಕ್ಕೆ ನಡೆದ ನಿರ್ದೇಶಕರ ಚುನಾವಣೆಯಲ್ಲಿ ಮಾಜಿ ಶಾಸಕ ಸುಭಾಷ್ ಆರ್ ಗುತ್ತೇದಾರ ಬೆಂಬಲಿಗರು ಹೆಚ್ಚಿನ ಸಂಖ್ಯೆಯಲ್ಲಿ ಗೆಲುವು ಸಾಧಿಸಿ ಮೆಲುಗೈ ಸಾಧಿಸಿದ್ದಾರೆ.

ಸಾಮಾನ್ಯ ಕ್ಷೇತ್ರದಿಂದ ಚೋಳಪ್ಪ ಇಬ್ರಾಹಿಂಪುರೆ, ಕಲ್ಯಾಣಿ ಶೇಳಕೆ, ಹಣಮಂತ ಕಾಳಜೆ, ಸಾಮಾನ್ಯ ಮಹಿಳಾ ಕ್ಷೇತ್ರದಿಂದ ಸಂಗಮ್ಮ ಕಣ್ಣಿ, ಸಾಲಗಾರರ ಪರಿಶಿಷ್ಟ ಪಂಗಡ ಕ್ಷೇತ್ರದಿಂದ ಶಂಕರ ಹಂಗರಗಿ, ಸಾಲಗಾರರಲ್ಲದ ಸಾಮಾನ್ಯ ಕ್ಷೇತ್ರದಿಂದ ಬರಗಾಲಿ ರಾಯಪ್ಪ ಪೂಜಾರಿ ಚುನಾವಣೆಯಲ್ಲಿ ಬಹುಮತ ಪಡೆದು ಹಾಗೂ ಸಾಲಗಾರರ ಹಿಂದುಳಿದ ವರ್ಗ ಬ ದಲ್ಲಿ ಕಲ್ಯಾಣಿ ಚಲಗೇರಿ ಅವಿರೋಧವಾಗಿ ಮಾಜಿ ಶಾಸಕ ಗುತ್ತೇದಾರ ಬೆಂಬಲಿಗರು ಆಯ್ಕೆಯಾಗಿದ್ದಾರೆ.

ರವಿವಾರ ನಡೆದ 12 ನಿರ್ದೇಶಕರ ಸ್ಥಾನದ ಚುನಾವಣೆಯಲ್ಲಿ 8 ಜನ ಮಾಜಿ ಶಾಸಕ ಸುಭಾಷ್ ಆರ್ ಗುತ್ತೇದಾರ ಬೆಂಬಲಿಗರು ಗೆಲುವಿನ ನಗೆ ಬೀರಿದರು. ಗೆಲುವಿನ ನಂತರ ಅಭ್ಯರ್ಥಿಗಳು, ಬೆಂಬಲಿಗರು ಮತ್ತು ಮುಖಂಡರು ವಿಜಯೋತ್ಸವ ಆಚರಿಸಿದರು.

ಗೆಲುವಿಗೆ ಕಾರಣರಾದ ಕೃಷಿ ಪತ್ತಿನ ಸಹಕಾರ ಸಂಘದ ಎಲ್ಲ



ಸದಸ್ಯರಿಗೆ, ಕಾರ್ಯರ್ತರಿಗೆ, ಮುಖಂಡರಿಗೆ ಮಾಜಿ ಶಾಸಕ ಸುಭಾಷ್ ಆರ್ ಗುತ್ತೇದಾರ, ಜಿ.ಪಂ ಮಾಜಿ ಉಪಾಧ್ಯಕ್ಷ ಹರ್ಷಾ ಎಸ್ ಗುತ್ತೇದಾರ ಧನ್ಯವಾದ ಸಲ್ಲಿಸಿದ್ದಾರೆ.

ಮುಂದಿನ ದಿನಗಳಲ್ಲಿ ನೂತನ ನಿರ್ದೇಶಕರು ರೈತರ ಏಳಿಗೆಯ ನಿಟ್ಟಿನಲ್ಲಿ ಒಟ್ಟಾಗಿ ಕೆಲಸ ಮಾಡಿ ಸಂಘವನ್ನು ಎತ್ತರಕ್ಕೆ ಕೊಂಡೊಯ್ಯಬೇಕು ಎಂದು ಸಲಹೆ ನೀಡಿದ್ದಾರೆ. ಈ ಸಂದರ್ಭದಲ್ಲಿ ಹಣಮಂತ ಕಾಬಡೆ, ಸುಭಾಷ ಪಾಟೀಲ, ಶ್ರೀಮಂತ ಝುಲ್ಪೆ, ಬಾಬುಗೌಡ ಪಾಟೀಲ, ಸಂಜು ಮೂಲಗೆ, ಯಲ್ಲಪ್ಪ ಪೂಜಾರಿ, ಮಾಣಿಕ ಮೂಲಗೆ, ಸಾಗರ ಪಾಟೀಲ, ಖಂಡುರಾವ ಬಿರಾದಾರ, ಸಾತಣ್ಣಾ ಕಾಳಜೆ, ಪರಮೇಶ್ವರ ಬಿರಾದಾರ, ಧರೇಪ್ಪ ಜಕಾಪೂರೆ ಸೇರಿದಂತೆ ಇತರರು ಇದ್ದರು.

# ಸೂತ್ರಧಾರಿಗಳಿಗೆ ಎಸ್‌ಐಟಿ ಬಲೆ

**ಮಂಗಳೂರು,ಆ.25–**ಧರ್ಮಸ್ಥಳದ ವಿರುದ್ಧ ಷಡ್ಯಂತ್ರ ರೂಪಿಸಿದವರ ಹೆಸರುಗಳನ್ನು ಬಂಧಿತ ಮುಸುಕುಧಾರಿ ಚಿನ್ನಯ್ಯ ಪೊಲೀಸ್ ವಿಚಾರಣೆಯಲ್ಲಿ ಬಾಯ್ಬಿಟ್ಟಿದ್ದು, ಧರ್ಮಸ್ಥಳದ ಷಡ್ಯಂತ್ರದ ಹಿಂದಿರುವ ಸೂತ್ರಧಾರಿಗಳ ವಿಚಾರಣೆಗೆ ಎಸ್‌ಐಟಿ ಸಿದ್ಧತೆ ನಡೆಸಿದ್ದು, ಷಡ್ಯಂತ್ರದಲ್ಲಿ ಭಾಗಿಯಾಗಿರುವ ಹಲವರಿಗೆ ಬಂಧನದ ಭೀತಿ ಎದುರಾಗಿದೆ.

ಧರ್ಮಸ್ಥಳ ಷಡ್ಯಂತ್ರ ಪ್ರಕರಣಕ್ಕೆ ಸಂಬಂಧಿಸಿದಂತೆ ಎಸ್‌ಐಟಿ ಈಗಾಗಲೇ ಮುಸುಕುಧಾರಿ ಚಿನ್ನಯ್ಯನನ್ನು ಬಂಧಿಸಿ ಯು ಟೂಬರ್ ಸಮೀರ್‌ನನ್ನು ವಿಚಾರಣೆಗೆ ಒಳಪಡಿಸಿದೆ.

ಈ ವಿಚಾರಣೆ ಸಂದರ್ಭದಲ್ಲಿ ಷಡ್ಯಂತ್ರದ ಸೂತ್ರಧಾರಿಗಳ ಬಗ್ಗೆ ಎಸ್‌ಐಟಿ ಪೊಲೀಸರಿಗೆ ಹಲವು ಮಾಹಿತಿಗಳು ಸಿಕ್ಕಿದ್ದು, ಈ ಮಾಹಿತಿ ಆಧಾರದ ಮೇಲೆ ಸೂತ್ರಧಾರಿಗಳ ವಿಚಾರಣೆಗೂ ಎಸ್‌ಐಟಿ ಮುಂದಾಗಿದ್ದು, ಹಲವರಿಗೆ ವಿಚಾರಣೆಗೆ ಹಾಜರಾಗುವಂತೆ ನೋಟಿಸ್ ಜಾರಿಮಾಡಲಿದೆ ಎಂದು ಹೇಳಲಾಗಿದೆ.

ಮುಸುಕುಧಾರಿ ಚಿನ್ನಯ್ಯನ ಬಂಧನದ ನಂತರ ಧರ್ಮಸ್ಥಳದ ಷಡ್ಯಂತ್ರದಲ್ಲಿ ಯಾರೆಲ್ಲ ಭಾಗಿಯಾಗಿದ್ದಾರೆ. ಯಾರು ಯಾರು ಯಾವ ರೀತಿ ಈ ಪ್ರಕರಣದಲ್ಲಿ ಪಾತ್ರ ವಹಿಸಿದ್ದಾರೆ ಎಂಬ ಬಗ್ಗೆ ಬಂಧಿತ ಮುಸುಕುಧಾರಿ ಪೊಲೀಸರ ಮುಂದೆ ಎಲ್ಲವನ್ನು ಬಹಿರಂಗಪಡಿಸಿದ್ದು, ತನ್ನ ಜತೆ ನಂಟು ಹೊಂದಿರುವ ಷಡ್ಯಂತ್ರ ಸೂತ್ರಧಾರಿಗಳ ದೊಡ್ಡ ಪಟ್ಟಿಯನ್ನೇ ಈ ಮುಸುಕುಧಾರಿ ಪೊಲೀಸರಿಗೆ ನೀಡಿದ್ದಾನೆ ಎನ್ನಲಾಗಿದೆ.

ಮುಸುಕುಧಾರಿಯ ತೀವ್ರ ವಿಚಾರಣೆ ನಂತರ ಆತನ ಹಿಂದೆ ಇರುವ ಸೂತ್ರಧಾರಿಗಳ ವಿಚಾರಣೆಗೆ ಒಳಪಡಿಸಿ ಅವಶ್ಯ ಎನಿಸಿದರೆ ಅವರನ್ನು ಬಂಧಿಸಲು ಎಸ್‌ಐಟಿ ಸಿದ್ಧತೆ ಮಾಡಿಕೊಂಡಿದ್ದು, ಸೂತ್ರಧಾರಿಗಳಿಗೆ ಬಂಧನದ ಭೀತಿ



ಕಾಡುತ್ತಿದೆ. ಯಾವುದಕ್ಕೂ ಆತುರ ಪಡದೆ ಎಲ್ಲವನ್ನೂ ಕಾನೂನಿನ ಚೌಕಟ್ಟಿನಲ್ಲೇ ಸೂಕ್ಷ್ಮವಾಗಿ ನಿಭಾಯಿಸಿ ಒಬ್ಬೊಬ್ಬರೇ ಸೂತ್ರಧಾರಿಗಳನ್ನು ಎಡೆಮುರಿ ಕಟ್ಟಲು ಎಸ್‌ಐಟಿ ಮುಂದಾಗಿದೆ ಎಂದು ಹೇಳಲಾಗುತ್ತಿದ್ದು, ಧರ್ಮಸ್ಥಳ ವಿರುದ್ಧ ಷಡ್ಯಂತ್ರದ ಸೂತ್ರಧಾರಿಗಳು ಯಾರೆಲ್ಲ ಇದ್ದಾರೆ ಎಂಬುದು ಶೀಘ್ರದಲ್ಲೇ ಜಗಜ್ಜಾಹೀರಾಗಲಿದೆ.

ಬಂಧಿತ ಮುಸುಕುಧಾರಿಯ ಮಾಹಿತಿ ಮೇರೆಗೆ ಎಸ್‌ಐಟಿ ಪೊಲೀಸರು ಸೂತ್ರಧಾರಿಗಳ ಹಿನ್ನೆಲೆ, ಮುನ್ನಲೆ ಎಲ್ಲವನ್ನೂ ಕಲೆ ಹಾಕುತ್ತಿದ್ದು, ಸಂದರ್ಭ ನೋಡಿಕೊಂಡು ಇವರನ್ನೆಲ್ಲ ವಿಚಾರಣೆಗೆ ಕರೆಯುವ ಸಾಧ್ಯತೆಯೂ ಇದೆ.

# ಅಪ್ಪ ಮತ್ತು ಗಂಡು ಮಕ್ಕಳು

ಕೇರಮ ಆಡುತ್ತಾ ಕುಳಿತಿದ್ದ ಆ ಗುಂಪಿನ ಯುವ ಜನತೆಯಲ್ಲಿ ಪ್ರಶ್ನೆಯೊಂದು ಉದ್ಭವಿಸಿತು.

ಜಗತ್ತಿನಲ್ಲಿ ಅತ್ಯಂತ ಕಷ್ಟವಾದ ಕೆಲಸ ಯಾವುದು? ಎಂದು ಕೇಳಿದಾಗ ಒಬ್ಬೊಬ್ಬರು ಒಂದೊಂದು ರೀತಿಯ ಉತ್ತರವನ್ನು ನೀಡಿದರು ಆದರೆ ಓರ್ವ ಯುವಕ ಮಾತ್ರ ಗಂಡು ಮಕ್ಕಳು ತಮ್ಮ ತಂದೆಯನ್ನು ತಬ್ಬಿಕೊಳ್ಳುವುದು ಜಗತ್ತಿನಲ್ಲಿಯೇ ಅತಿ ಕಷ್ಟದ ಕೆಲಸ ಎಂದು ಹೇಳಿದ. ಅಲ್ಲಿ ಸೇರಿದ್ದ ಉಳಿದೆಲ್ಲ ಯುವಕರು ಆತನ ಮಾತಿಗೆ ಸಹಮತಿ ವ್ಯಕ್ತಪಡಿಸುತ್ತಾ ತಲೆದೂಗಿದರೆ ಹೆಣ್ಣು ಹುಡುಗಿಯರು ಅಚ್ಚರಿಯಿಂದ ಕಣ್ಣರಳಿಸಿದರೂ ಕೂಡ ಒಪ್ಪಿಗೆಯನ್ನು ಸೂಚಿಸಿದರು.

"ಸಜಾತೀಯ ದ್ರುವಗಳು ಪರಸ್ಪರ ವಿಕಸಿಸುತ್ತವೆ" ಎಂಬ ಮಾತು ಬಹುಶಹ ಅಪ್ಪ ಮತ್ತು ಮಗನ ಸಂಬಂಧದಲ್ಲಿ ನಾವು ಕಾಣುತ್ತೇವೆ. ತಾಯಿ ಮತ್ತು ಮಗಳ ಸಂಬಂಧ ಒಂದು ಹಂತದಲ್ಲಿ ಪಕ್ವವಾದಾಗ ಅವರಿಬ್ಬರೂ ಸ್ನೇಹಿತರಾಗಿ ಬದಲಾಗಬಹುದು... ಒಬ್ಬರಿಗೊಬ್ಬರು ಕಷ್ಟ ಸುಖಗಳನ್ನು ಹಂಚಿಕೊಳ್ಳುವ ಸರಸ ಸಂಭಾಷಣೆಯಲ್ಲಿ ತೊಡಗಿಕೊಳ್ಳುವ ಕೆಲವೇ ನಿಮಿಷಗಳ ಹಿಂದೆ ಕಿತ್ತಾಡಿದರೂ ಕೂಡ ಮತ್ತೆ ಒಟ್ಟಾಗಿ ಕುಳಿತು ಹರಟೆ ಹೊಡೆಯುವ ಅಮ್ಮ ಮಗಳ ಜೋಡಿಯನ್ನು ನಾವು ನೋಡುತ್ತೇವೆ, ಆದರೆ ಅದೆಷ್ಟೇ ಆತ್ಮೀಯತೆ ಇದ್ದರೂ ಕೂಡ ಅಪ್ಪ ಮತ್ತು ಮಗನ ಸಂಬಂಧದಲ್ಲಿ ಈ ಹಿಂದೆ ತಾವು ಮಕ್ಕಳಾಗಿ ತಮ್ಮ ತಂದೆಯರ ಜೊತೆಗೆ ಈ ರೀತಿಯ ತಬ್ಬುಗೆ ಸಾಧ್ಯವಾಗುತ್ತಿರಲಿಲ್ಲ ಎಂಬುದು ಅವರ ಅಭಿಪ್ರಾಯ ಎಷ್ಟೋ ಬಾರಿ ತಂದೆಯನ್ನು ತಬ್ಬುವುದೇ ಬದುಕಿನ ಬಹುದೊಡ್ಡ ಕನಸು ಎಂದು ಹೇಳಿಕೊಂಡ ಗಂಡು ಮಕ್ಕಳನ್ನು ನಾವು ಕಾಣಬಹುದು.

ಅಂತಹದ್ದೇ ಒಬ್ಬ ಮಗ ತನ್ನ ತಂದೆಗೆ ತನ್ನ ಮೇಲೆ ಇರಬಹುದಾದ ಪ್ರೀತಿಯನ್ನು ವ್ಯಕ್ತಪಡಿಸಿರುವುದು ಹೀಗೆ.... ನನ್ನಪ್ಪ ನನಗೆಂದು ಐ ಲವ್ ಯು ಹೇಳಲಿಲ್ಲ ನಿಜ ಆದರೆ ಪ್ರತಿದಿನ ನಾನು ಹೇಳುವ ಮುಂಚೆಯೇ ಕೆಲಸಕ್ಕೆ ಹೊರಟು ಹೋಗುತ್ತಿದ್ದ ಅವರು ನನ್ನ ಕೋಣೆಯಲ್ಲಿ ಇಣುಕಿ ನೋಡಿ ನಾನು ರಾತ್ರಿ ಚೆನ್ನಾಗಿ ನಿದ್ರಿಸಿದ್ದೇನೆಯೇ? ಎಂದು ನನ್ನನ್ನು ನಿಟ್ಟಿಸಿ ನೋಡುತ್ತಿದ್ದರು. ನನ್ನ ಕೋಣೆಯ ಕಿಟಕಿಯನ್ನು ಸರಿಯಾಗಿ ಮುಚ್ಚಿದ್ದೇನೆಯೇ? ಎಂದು ಪರಿಶೀಲಿಸುತ್ತಿದ್ದರು

ಅವರು ತುಂಬಾ ಬೇಗನೆ ಕಚೇರಿಗೆ ಹೋಗುತ್ತಿದ್ದುದರಿಂದ ನನ್ನ ಮುಂಜಾನೆಯ ತಿಂಡಿಯನ್ನು ತಯಾರಿಸಿ ಹಾಲನ್ನು ಕಾಯಿಸಿ ಅದಕ್ಕೆ ಒಂದಷ್ಟು ಬೋರ್ನವಿಟಾ ಹಾಕಿ ಕಲಸಿ ಗ್ಲಾಸಿಗೆ ಹಾಕಿ ಅವೆಲ್ಲವನ್ನು ಮೇಜಿನ ಮೇಲೆ ಇಟ್ಟಿರುತ್ತಿದ್ದರು. ಮಧ್ಯಾಹ್ನದ ಊಟಕ್ಕೆ ಅಡುಗೆಯನ್ನು ತಯಾರಿಸಿ ನನ್ನ ಲಂಚ್ ಬಾಕ್ಸ್ ಕಟ್ಟಿ ಮೇಜಿನ ಮೇಲೆ ಸಿದ್ಧವಾಗಿಡುತ್ತಿದ್ದರು.



ಅವರು ನನ್ನನ್ನು ಎಂದೂ ಎಬ್ಬಿಸುತ್ತಿರಲಿಲ್ಲ... ಗುಡ್ ಬೈ ಹೇಳಲು ಕೂಡ. ಆದರೆ ಅವರು ತಮ್ಮ ಎಲ್ಲ ಕೆಲಸಗಳನ್ನು ನನಗೆ ಎಚ್ಚರವಾಗದಿರಲಿ ಎಂದು ಅತಿ ಜಾಗರೂಕತೆಯಿಂದ ಮಾಡುವುದನ್ನು ನಾನು ಮಲಗಿದ್ದಲ್ಲಿಯೇ ಅವರಿಗೆ ಗೊತ್ತಿಲ್ಲದಂತೆ ಆಲಿಸುತ್ತಿದ್ದೆ.ಅಂತಿಮವಾಗಿ ಎಲ್ಲವನ್ನು ತಯಾರಿಸಿ ಸ್ನಾನ ಮಾಡಿ ತಿಂಡಿ ತಿಂದು ತಮ್ಮ ಡಬ್ಬವನ್ನು ಕಟ್ಟಿಕೊಳ್ಳುವ ಅಪ್ಪ ತಮ್ಮ ಕಾಲಿನ ಶೂಗಳ ಶಬ್ದ ಕೂಡ ಆಗದಂತೆ ಧರಿಸಿ ಮನೆಯ ಹೊರಗೆ ನಡೆದು ಹೊರಗಿಂದಲೇ ಒಳಗಿನ ಕೀಲಿ ಬೀಳುವಂತೆ ಮನೆಯ ಬಾಗಿಲನ್ನು ಲಾಕ್ ಮಾಡಿಕೊಂಡು ಹೊರಟು ಹೋಗುತ್ತಿದ್ದರು.

ಅವರೆಂದೂ ಶಾಲೆಯಲ್ಲಿ ಏನು ನಡೆಯಿತು ಹೇಗೆ ಆ ದಿನವನ್ನು ನಾನು ಕಳೆದೆ ಎಂದು ಕೇಳಿಲ್ಲ ನಿಜ, ಆದರೆ ನನ್ನ ಬಳಿ ಹೊಸ ನೋಟ್ ಬುಕ್ ಗಳು ಇವೆಯೇ ಈಗಾಗಲೇ ಕೊಡಿಸಿರುವ ನೋಟ್ ಪುಸ್ತಕಗಳನ್ನು ನಾನು ಸಂಪೂರ್ಣವಾಗಿ ಬಳಸಿದ್ದೇನೆಯೇ? ಹೊಸ ನೋಟು ಪುಸ್ತಕಗಳು ನನ್ನ ಬಳಿ ಇವೆಯೇ ಎಂಬುದನ್ನು ಮಾತ್ರ ಖಂಡಿತವಾಗಿ ಖಚಿತಪಡಿಸಿಕೊಳ್ಳುತ್ತಿದ್ದರು. ಅವರೆಂದೂ ನನಗೆ ಒಳ್ಳೆಯ ಅಂಕಗಳು ಬಂದಾಗ ಹೆಮ್ಮೆಯಿಂದ ಬೇರೆಯವರ ಎದುರು ಹೇಳಿಕೊಳ್ಳಲಿಲ್ಲ ಆದರೆ ನನ್ನ ಅನುಪಸ್ಥಿತಿಯಲ್ಲಿ ನನ್ನ ಮೆಡಲುಗಳನ್ನು ಸರ್ಟಿಫಿಕೇಟ್ಗಳನ್ನು ಮುಟ್ಟಿ ಸವರಿ ಸಂತಸ ಪಡುವ ಹೆಮ್ಮೆಯಿಂದ ಬೀಗುವ ನನ್ನಪ್ಪನ ಚರ್ಯೆ ನನಗೆ ಬಲು ಪ್ರೀತಿ..ತಬ್ಬಿಕೊಳ್ಳುವ, ಮುದ್ದಿಸುವುದರ ಮೂಲಕ ತಮ್ಮ ಪ್ರೀತಿಯನ್ನು ಜಗಜ್ಜಾಹೀರುಗೊಳಿಸುವುದಷ್ಟೇ ಪ್ರೀತಿ ಎಂದು ನಾನು ಇಲ್ಲಿಯವರೆಗೂ ತಿಳಿದುಕೊಂಡಿದ್ದೆ... ಆದರೆ ವರ್ಷಗಳು ಸರಿದಂತೆ ನನಗೆ ಅರಿವಾದದ್ದು ಎಲ್ಲರಿಗೂ ತಮ್ಮ ಪ್ರೀತಿಯನ್ನು ಶಬ್ದಗಳಲ್ಲಿ ಹೇಳಲು ಬರುವುದಿಲ್ಲ, ವರ್ತನೆಯ ಮೂಲಕ ಹೇಳಿಕೊಳ್ಳಲು ಸಾಧ್ಯವಾಗುವುದಿಲ್ಲ.... ಆದರೆ ತಮ್ಮ ಮಕ್ಕಳ ಭವ್ಯ ಭವಿಷ್ಯಕ್ಕಾಗಿ ಹಗಲಿರುಳೆನ್ನದೆ ಕಾರ್ಯನಿರ್ವಹಿಸುವುದು ಕೂಡ ಒಂದು ಪ್ರೀತಿಯೇ.

ತಾನು ಹರಿದ ಚಪ್ಪಲಿಯನ್ನು ತೊಟ್ಟರು ಕೂಡ ಮಕ್ಕಳಿಗೆ ಒಳ್ಳೆಯ ಶೂಗಳನ್ನು ಕೊಡಿಸುವುದು. ತಾನು ಕಾಲ್ನಡಿಗೆಯಲ್ಲಿ ಓಡಾಡಿದರೂ ಕೂಡ ಮಕ್ಕಳಿಗೆ ದ್ವಿಚಕ್ರವಾಹನ ಕೊಡಿಸಿ ಅದರಲ್ಲಿ ಅವರ ಹಿಂದೆ ಕುಳಿತು ಹೆಮ್ಮೆಯಿಂದ ಓಡಾಡುವುದು ಕೂಡ ಪ್ರೀತಿಯ ಮತ್ತೊಂದು ವ್ಯಕ್ತ ಸ್ವರೂಪ ಎಂಬುದನ್ನು ನಾನು ಅರಿತೆ. ನನ್ನಪ್ಪನ ಹಲವಾರು ರಾತ್ರಿಗಳ ದಣಿವಿನಿಂದ ಕೂಡಿದ, ನಿದ್ರೆ ಇಲ್ಲದ ಕರ್ತವ್ಯ ಪರತೆಯು ನನ್ನ ಬದುಕನ್ನು ನಾನಿರುವವರೆಗೂ ಮೇಲೆತ್ತುತ್ತದೆ ಎಂಬ ಸತ್ಯದ ಅರಿವು ನನಗೀಗ ಆಗಿದೆ.

ಮುಂದೆ ನನ್ನ ಮದುವೆಯಾಗಿ ನಾವು ದಂಪತಿಗಳು ಸಂತಸದಿಂದ ಒಡನಾಡಿದ ಫಲವಾಗಿ ನಮ್ಮ ಮಕ್ಕಳು ಹುಟ್ಟಿದಾಗ ನಮಗೆ ಸಿಗದ ಪ್ರೀತಿಯನ್ನು! ಅದರ ವ್ಯಕ್ತ ರೂಪವನ್ನು ನನ್ನಪ್ಪ ತನ್ನ ಮೊಮ್ಮಕ್ಕಳಿಗೆ ತೋರುವಾಗ ಎಷ್ಟೋ ಬಾರಿ ನಾನು ಕೂಡ ಮಗುವಾಗಿದ್ದರೆ ಹೀಗೆಯೇ ನನ್ನನ್ನು ನನ್ನಪ್ಪ ಮುದ್ದಾಡುತ್ತಿದ್ದರಲ್ಲವೇ ಎಂಬ ಭಾವ ನನ್ನನ್ನು ಕಾಡುತ್ತದೆ.

ಮಕ್ಕಳೊಂದಿಗೆ ಮಗುವಾಗಿ ಅವರ ಎಲ್ಲ ಬೇಕು ಬೇಡಗಳನ್ನು ಪೂರೈಸುವ ಸಮಯದಲ್ಲಿ ನನಗರಿವಿಲ್ಲದೆ ಅಸೂಯೆಯೊಂದು ಜಿನುಗುತ್ತದೆ. ಮೀಸೆಯ ಮರೆಯಲ್ಲಿ ಅದನ್ನು ಅಡಗಿಸಿಕೊಂಡು ಅವರಿಬ್ಬರ ಆಟ ಪಾಠಗಳನ್ನು ಆನಂದಿಸುತ್ತೇನೆ.

ಎಷ್ಟೇ ಆಗಲಿ ಅಸಲಿಗಿಂತ ಬಡ್ಡಿಯ ಮೇಲೆ ಪ್ರೀತಿ ಹೆಚ್ಚು ಎಂಬ ಹಿರಿಯರ ಮಾತು ಅಜ್ಜ, ಅಜ್ಜಿ ಮತ್ತು ಮೊಮ್ಮಕ್ಕಳ ಬಾಂಧವ್ಯವನ್ನು ನೋಡಿದಾಗ ಗೊತ್ತಾಗುತ್ತದೆ ಅಲ್ಲವೇ?

ಇನ್ನು ವಯಸ್ಸಾದಾಗ ನನ್ನಪ್ಪ ನನಗೆ ಮತ್ತಷ್ಟು ಹೆಚ್ಚು ಅರಿವಾಗುತ್ತಾರೆ.... ಆರಂಕಿಯ ಸಂಬಳ, ಸುಸಜ್ಜಿತವಾದ ಮನೆ ಓಡಾಡಲು ಕಾರು ಎಲ್ಲವೂ ಇದ್ದರೂ ಕೂಡ ಕೆಲವೊಮ್ಮೆ ಆರ್ಥಿಕ ಸ್ಥಿತಿಗತಿಗಳಲ್ಲಿ ವ್ಯತ್ಯಾಸವಾಗಿ ದುಡ್ಡಿಗಾಗಿ ಒದ್ದಾಡುವಾಗ ಕೇವಲ ನಾಲ್ಕು ಅಂಕಿಯ ಸಂಬಳದಲ್ಲಿ ಅಪ್ಪ ಅದು ಹೇಗೆ ಎಲ್ಲವನ್ನು ನಿರ್ವಹಿಸುತ್ತಿದ್ದರು ಎಂಬ ಭಾವ ಮನದಲ್ಲಿ ಸುಳಿದು ಹೋದಾಗ ಅಪ್ಪನ ತ್ಯಾಗ, ಅಸಹಾಯಕತೆ ಮತ್ತು ಆತನ ಮೌನ ಮತ್ತಷ್ಟು ಅರ್ಥವಾಗಿ ಓಡಿಹೋಗಿ ಅಪ್ಪನನ್ನು ತಬ್ಬಿ ಅಪ್ಪ ಅದು ಹೇಗೆ ಎಲ್ಲವನ್ನು ನಿಭಾಯಿಸಿದಿರಿ? ಎಂದು ಕೇಳುವ ಮನಸ್ಸಾಗುತ್ತದೆ.

ಆದರೆ ಇದೀಗ ಅಪ್ಪನಲ್ಲಿ ಈ ಹಿಂದೆ ಇದ್ದ ಅದೇ ಅಹಂ ಭಾವ ನನ್ನಲ್ಲಿಯೂ ಇದ್ದು ಹಾಗೆ ಮಾಡಲಾಗದೆ ಕೈ ಕೈ ಹಿಸುಕಿಕೊಂಡು ಒದ್ದಾಡುವಂತಾಗುತ್ತದೆ.ನಿಜ ಅಪ್ಪ ಎಂಬ ವ್ಯಕ್ತಿಯನ್ನು ಮಾತುಗಳಲ್ಲಿ ಖಂಡಿತವಾಗಿಯೂ ಹಿಡಿದಿಡಲಾಗದು, ಬರಹದಲ್ಲಿ ತುಂಬಿಕೊಡಲಾಗದು, ಆತನ ತ್ಯಾಗವನ್ನು ಅಳತೆ ಮಾಡುವ ಮೀಟರು ಯಾರಿಗೂ ಇಲ್ಲ ಆತನ ಮೌನದ ಹಿಂದಿರುವ ತಾತ್ವಿಕ ಶಕ್ತಿಯ ಆಳ, ಅಗಲ ಮತ್ತು ಗಹನತೆಗಳು ನಮಗೆಂದೂ ಅರಿವಾಗುವುದೇ ಇಲ್ಲ.

ಒಂದು ರೀತಿಯಲ್ಲಿ ಅಪ್ಪ ಶಿವನಿದ್ದಂತೆ. ಜಗತ್ತಿನ ಎಲ್ಲಾ ಹಾಲಾಹಲವನ್ನು ತಾನು ಕುಡಿದು ನಂಜುಂಡನಾದ ಶಿವನಂತೆ ಬದುಕಿನಲ್ಲಿ ಬರುವ ಎಲ್ಲಾ ಕಷ್ಟ ನಿಷ್ಟುರಗಳನ್ನು ಕುತ್ತಿಗೆಯವರೆಗೂ ಸಹಿಸುತ್ತಿರುವ ಅಪ್ಪ ನಮ್ಮ ಪಾಲಿನ ನಂಜುಂಡೇಶ್ವರನೇ ಸರಿ.

ಜಗವೆಲ್ಲ ನಗುತಿರಲಿ ಜಗದಳಲು ನನಗಿರಲಿ ಎಂಬ ಕವಿವಾಣಿಯಂತೆ ಬದುಕಿನ ಎಲ್ಲ ನೋವುಗಳನ್ನು ತನ್ನಲ್ಲಿ ಅದುಮಿಟ್ಟುಕೊಂಡು ಕುಟುಂಬದ ಸದಸ್ಯರೆಲ್ಲರ ನಗು ಮೊಗಗಳಲ್ಲಿಯೇ ಸಂತಸವನ್ನು ಕಾಣುವ ಅಪ್ಪ ನಿಜಕ್ಕೂ ಗ್ರೇಟ್.

ಅಮ್ಮನ ಪ್ರೀತಿ, ಮಮತೆ, ಹುಸಿ ಮುನಿಸು, ಸಿಟ್ಟು, ಬೇಸರಗಳು ಕಾಣುವಂತೆ ನಮಗೆ ಅಪ್ಪನ ಯಾವ ಭಾವಗಳು ಕಾಣುವುದಿಲ್ಲ. ಕೌಟುಂಬಿಕ ಸವಾಲುಗಳು ಆತನ ಹೃದಯದಲ್ಲಿ ಸದಾ ಕುದಿಯುವ ಲಾವಾರಸದಂತೆ ಇದ್ದರೂ ಕೂಡ ಹೊರಗೆ ತಣ್ಣಗಿನ ಜ್ವಾಲಾಮುಖಿಯಂತೆ ಕಾಣುವ ಅಪ್ಪ ಉಪಮಾತೀತ.

ಅಪ್ಪನ ಕುರಿತ ಗಂಡು ಮಕ್ಕಳ/ ಗಂಡು ಮಕ್ಕಳ ಕುರಿತ ಅಪ್ಪನ ಪ್ರೀತಿಯನ್ನು ನಾವು ಕೇಳಲು ಸಾಧ್ಯವಿಲ್ಲ... ಆದರೆ ಆ ಪ್ರೀತಿಯನ್ನು ಮನೆಯ ಪ್ರತಿಯೊಂದು ಮೂಲೆಯಲ್ಲೂ ಕಾಣಬಹುದು. ಅಪ್ಪ ನಿಜಕ್ಕೂ ಗ್ರೇಟ್. ಏನಂತೀರಾ ಸ್ನೇಹಿತರೆ?

**–ವೀಣಾ ಹೇಮಂತ್ ಗೌಡ ಪಾಟೀಲ್**

**ಮುಂಡರಗಿ, ಗದಗ್**

# ಹಸಿರು ದೇವದುರ್ಗ ಪರಿಕಲ್ಪನೆಗೆ ಜನ ಮೆಚ್ಚುಗೆ

**ದೇವದುರ್ಗ:**ನಮ್ಮ ಜೀವನದ ಅಸ್ತಿತ್ವ ಮತ್ತು ಸುಸ್ಥಿರತೆಯು ನಮ್ಮ ಪರಿಸರದಿಂದ ಮಾತ್ರ ಸಾಧ್ಯ. ಇದು ಮಾನವರು, ಸಸ್ಯಗಳು, ಪ್ರಾಣಿಗಳು, ನೀರು, ಗಾಳಿ ಇತ್ಯಾದಿಗಳನ್ನು ಒಳಗೊಂಡಂತೆ ನಮ್ಮ ಸುತ್ತಮುತ್ತಲಿನ ಪ್ರತಿಯೊಂದು ಜೀವಂತ ಮತ್ತು ನಿರ್ಜೀವ ಘಟಕಗಳನ್ನು ಒಳಗೊಂಡಿದೆ. ನಾವು ಬದುಕಲು ಬೇಕಾದ ಎಲ್ಲವನ್ನು ನಮ್ಮ ಪರಿಸರ ನಮಗೆ ಒದಗಿಸುತ್ತದೆ. ನಮ್ಮ ಪರಿಸರವನ್ನು ಉಳಿಸುವ ಮತ್ತು ರಕ್ಷಿಸುವ ಜವಾಬ್ದಾರಿ ನಮ್ಮೆಲ್ಲರದ್ದು.

ಇಂತಹ ಅಮೂಲ್ಯ ಪರಿಸರ ಕಾಳಜಿ ಮತ್ತು ಸಂರಕ್ಷಣೆ ವಿಷಯಕ್ಕೆ ಬಂದಾಗ ನಮ್ಮ ರಾಯಚೂರು ಜಿಲ್ಲೆಯಲ್ಲಿ ಯುವಕರ ತಂಡವೊಂದು ಸದ್ದಿಲ್ಲದೆ ಸುದ್ದಿ ಮಾಡುತ್ತಿದೆ. ಸಹಾಯಕ ಪ್ರಾಧ್ಯಾಪಕರಾದ ಡಾ. ಮಾರುತಿ ಕುಮಾರ ಮಲದಕಲ್ ರವರ ನಾಯಕತ್ವದ ಅದುವೇ ಮಲದಕಲ್ ಗೆಳೆಯರ ಬಳಗ.

ಹೌದು. ಪ್ರತಿ ವರ್ಷ ಮಳೆಗಾಲ ಬಂದರೆ ಸಾಕು ಈ ಯುವಕರ ತಂಡ ದೇವದುರ್ಗ ತಾಲ್ಲೂಕಿನಾದ್ಯಂತ ಸಾವಿರಾರು ಸಸಿಗಳನ್ನು ಹೊತ್ತ ವಾಹನಗಳು ಎಲ್ಲಾ ಕಡೆ ಸಂಚರಿಸುತ್ತಾ ಜನರ ಗಮನವನ್ನು ಸೆಳೆಯುತ್ತಿವೆ.

ಈ ತಂಡದ ಯುವಕರು ತಮ್ಮ ಸ್ವಂತ ಖರ್ಚಿನಲ್ಲಿ ಸುಸಜ್ಜಿತ ವಾಹನಗಳ ಜೊತೆ ಅರಣ್ಯ ಇಲಾಖೆಯ ಸಹಕಾರದೊಂದಿಗೆ ಸಸಿಗಳನ್ನು ತುಂಬಿಕೊಂಡು

ದೇವದುರ್ಗ ತಾಲ್ಲೂಕಿನಾದ್ಯಂತ ಸಂಚರಿಸಿ ಸಸಿಗಳನ್ನು ನೆಡುವ ಮೂಲಕ ಪರಿಸರ ಕಾಳಜಿಯನ್ನು ತೋರಿಸುತ್ತದೆ.

ಸಹಾಯಕ ಪ್ರಾಧ್ಯಾಪಕರಾದ ಡಾ. ಮಾರುತಿ ಕುಮಾರ ಮಲದಕಲ್ ರವರ ನಾಯಕತ್ವದ ಮಲದಕಲ್ ಗೆಳೆಯರ ಬಳಗ ಕಳೆದ ಐದು ವರ್ಷಗಳಿಂದ ತಮ್ಮ ಸಾಮಾಜಿಕ, ಪರಿಸರ , ಆರೋಗ್ಯ ಮತ್ತು ಶೈಕ್ಷಣಿಕ ಚಟುವಟಿಕೆಗಳಿಂದ ಜಿಲ್ಲಾದ್ಯಂತ ಮನೆಮಾತಾಗಿದೆ . ಕಳೆದ ಐದು ವರ್ಷಗಳಿಂದ ಮಲದಕಲ್ ಗೆಳೆಯರ ಬಳಗವು ದೇವದುರ್ಗ ತಾಲೂಕನ್ನು ಹಸಿರನ್ನಾಗಿ ಮಾಡುವ ಸಂಕಲ್ಪ ಮಾಡಿ *ಹಸಿರು ದೇವದುರ್ಗ ಪರಿಕಲ್ಪನೆ* ಅಡಿಯಲ್ಲಿ ತಾಲೂಕಿನಾದ್ಯಂತ ಪ್ರತಿವರ್ಷ ಅರಣ್ಯ ಇಲಾಖೆಯ ಸಹಕಾರದೊಂದಿಗೆ 5 ಸಾವಿರ ಸಸಿಗಳನ್ನು ನೆಟ್ಟು ಪರಿಸರ ಸಂರಕ್ಷಣೆ ಮಾಡುತ್ತಿದೆ.

ಕಳೆದ ಐದು ವರ್ಷಗಳಿಂದ ಅವಿಭಜಿತ ದೇವದುರ್ಗ ತಾಲೂಕಿನ ಗ್ರಾಮಾಂತರ ಪ್ರದೇಶದ ಶಾಲಾ–ಕಾಲೇಜುಗಳು, ದೇವಸ್ಥಾನಗಳು, ಸಮುದಾಯ ಭವನಗಳು ಸೇರಿದಂತೆ ಸೂಕ್ತ ಸಾರ್ವಜನಿಕ ಸ್ಥಳಗಳನ್ನು ಗುರುತಿಸಿ



ಅಲ್ಲಿಯ ಸ್ಥಳೀಯ ಯುವಕರ ಬೆಂಬಲದೊಂದಿಗೆ ಸಸಿಗಳನ್ನು ನೆಡಲಾಗುತ್ತದೆ.

ಈ ರೀತಿಯಾಗಿ ಕಳೆದ ಮೂರು ವರ್ಷಗಳಿಂದ ಮಲದಕಲ್ , ರಾಮದುರ್ಗ, ಕಾಕರಗಲ್, ಎನ್. ಗಣೇಕಲ್, ನಾಗಡದಿನ್ನಿ, ತಿಪ್ಪಲದಿನ್ನಿ, ಮುಷ್ಟೂರು, ಶಿವಂಗಿ , ಅಗ್ರಹಾರ, ಸುಂಕೇಶ್ವರಹಾಳ, ಹೀರೆರಾಯಕುಂಪಿ, ಪಿಲಿಗುಂಡ ಸೇರಿದಂತೆ ಹಲವು ಗ್ರಾಮಗಳ ಶಾಲೆಗಳು , ದೇವಸ್ಥಾನ ಸೇರಿದಂತೆ ಸಾರ್ವಜನಿಕ ಸ್ಥಳಗಳಲ್ಲಿ 5000ಕ್ಕೂ ಸಸಿಗಳನ್ನು ನೆಡಲಾಗಿದೆ.



ಅದರ ಮುಂದೆವರೆದ ಭಾಗವಾಗಿ ಈ ವರ್ಷ ದೇವದುರ್ಗ ವಿಧಾನಸಭಾ ಮತಕ್ಷೇತ್ರದ ಚಿಂತಲಕುಂಟಾ, ಜರದಬಂಡಿ, ಕೊತ್ತದೊಡ್ಡಿ , ಜಂಬಲದಿನ್ನಿ, ಸುಣ್ಣದಕಲ್, ಕಮಲದಿನ್ನಿ , ಗಾಣಧಾಳ , ಇರಬಗೇರಾ, ಜಿನ್ನಾಪುರ , ಹೇಮನೂರು, ಅರಕೇರಾ ಸೇರಿದಂತೆ ಹಲವು ಗ್ರಾಮಗಳ ಶಾಲೆಗಳು, ದೇವಸ್ಥಾನ ಸೇರಿದಂತೆ ಸಾರ್ವಜನಿಕ ಸ್ಥಳಗಳಲ್ಲಿ ಸಸಿಗಳನ್ನು ನೆಡಲಾಯಿತು.

ಮಲದಕಲ್ ಗೆಳೆಯರ ಬಳಗವು ಹಮ್ಮಿಕೊಂಡಿರುವ ಈ *ಹಸಿರು ದೇವದುರ್ಗ ಪರಿಕಲ್ಪನೆಗೆ* ತಾಲೂಕಿನ ಜನರು ಅದರಲ್ಲಿಯೂ ಯುವಕರು ಈ ತಂಡದ ಕಾರ್ಯವನ್ನು ಬೆಂಬಲಿಸುತ್ತಾ ಈ ತಂಡದ ಜೊತೆಗೂಡಿ ಹೆಚ್ಚಿನ ಸಂಖ್ಯೆಯಲ್ಲಿ ತಮ್ಮ ಗ್ರಾಮಗಳಲ್ಲಿ ಸಸಿಗಳನ್ನು ನೆಡುತ್ತಿದ್ದಾರೆ.

ಈ ಕುರಿತಾಗಿ ಮಲದಕಲ್ ಗೆಳೆಯರ ಬಳಗದ ರೂವಾರಿ ಹಾಗೂ ಸಹಾಯಕ ಪ್ರಾಧ್ಯಾಪಕರಾದ

ಡಾ. ಮಾರುತಿಕುಮಾರ ಮಲದಕಲ್ ರವರನ್ನು ಪತ್ರಿಕೆ ಸಂಪರ್ಕಿಸಿದಾಗ, ನಾಳೆಯ ಉಜ್ವಲ ಭವಿಷ್ಯಕ್ಕೆ ಪರಿಸರ ಅವಶ್ಯಕತೆ ಇದೆ. ಹಾಗಾಗಿ ಜಿಲ್ಲೆಯ ಅರಣ್ಯ ಇಲಾಖೆಯ ಅಧಿಕಾರಿಗಳ ಪ್ರೋತ್ಸಾಹದೊಂದಿಗೆ ಪರಿಸರವನ್ನು ಉಳಿಸಿ ಬೆಳೆಸುವ ಪ್ರಯತ್ನ ಮಾಡುತ್ತಿದ್ದೇವೆ ಎನ್ನುತ್ತಾರೆ. ಇಂತಹ ಪರಿಸರ ಕಾಳಜಿಯನ್ನು ತೋರಿಸುತ್ತಿರುವ ಮಲದಕಲ್ ಗೆಳೆಯರ ಬಳಗ ಮತ್ತು ಅದನ್ನು ಬೆಂಬಲಿಸುತ್ತಿರುವ ಅರಣ್ಯ ಇಲಾಖೆಗೆ ನಮ್ಮದೊಂದು ಸಲಾಂ.

ಮುಂದಿನ ಭವಿಷ್ಯದ ಏಳಿಗೆಗಾಗಿ ಈ ಪರಿಸರ ಕಾಳಜಿ ಹೀಗೆಯೇ ಮುಂದುವರೆಯಲಿ ಎಂದು ಆಶಿಸೋಣ.....

# ಧರ್ಮಸ್ಥಳ: ಎನ್ಐಎ ತನಿಖೆಗೆ ಬಿಜೆಪಿ ಆಗ್ರಹ

**ಬೆಂಗಳೂರು,ಆ.25**–ಧರ್ಮಸ್ಥಳ ಪ್ರಕರಣವನ್ನು ಎನ್ಐಎ ತನಿಖೆಗೆ ವಹಿಸಲು ಆಗ್ರಹಿಸಿರುವ ಬಿಜೆಪಿ, ಸೆಪ್ಟೆಂಬರ್ 1 ರಂದು ಧರ್ಮಸ್ಥಳ ಚಲೋ ನಡೆಸಿ ಧರ್ಮಸ್ಥಳದಲ್ಲಿ ದೊಡ್ಡ ಸಮಾವೇಶವನ್ನು ನಡೆಸಲಿದೆ.

ಬೆಂಗಳೂರಿನ ಬಿಜೆಪಿ ಕಚೇರಿಯಲ್ಲಿಂದು ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ ವಿಜಯೇಂದ್ರ ಅವರು ಆರ್ಸಿಬಿ ಗೆಲುವಿನ ಲಾಭ ಪಡೆಯಲಿ ಆತುರ ತೋರಿ 11 ಜನರ ಜೀವ ಬಲಿ ಪಡೆದ ಕಾಂಗ್ರೆಸ್ ಸರ್ಕಾರ ಧರ್ಮಸ್ಥಳ ಪ್ರಕರಣದಲ್ಲೂ ಆತುರದಿಂದ ಎಸ್ಐಟಿ ರಚಿಸಿದೆ. ಧರ್ಮಸ್ಥಳದ ಬಗ್ಗೆ ನಿರಂತರ ಅಪಪ್ರಚಾರ ಸಾಮಾಜಿಕ ಜಾಲತಾಣದಲ್ಲಿ ನಡೆದಿದೆ. ಈ ಕಳಂಕದಿಂದ ಸರ್ಕಾರ ಹೊರ ಬರಬೇಕು. ಹಾಗೆಯೇ ತಪ್ಪಿತಸ್ಥರ ಮೇಲೆ ಸೂಕ್ತ ಕ್ರಮ ಆಗಲು ಎನ್ಐಎ ತನಿಖೆಗೆ ಪ್ರಕರಣವನ್ನು ಒಪ್ಪಿಸಬೇಕೆಂದು ಒತ್ತಾಯಿಸಿದರು.

ಎಸ್ಐಟಿ ತನಿಖೆಗೆ ಒತ್ತಡ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಮೇಲೆ ಒತ್ತಡ ಹೇರಿದ ಶಕ್ತಿ ಯಾವುದು ಎಂಬುದು ರಾಜ್ಯದ ಜನರಿಗೆ ಗೊತ್ತಾಗಬೇಕಿದೆ. ಧರ್ಮಸ್ಥಳದ ಭಕ್ತಾದಿಗಳ ಮನಸ್ಸಿಗೆ ಘಾಸಿಯುಂಟಾಗಿದೆ. ಅಂತಾರಾಷ್ಟ್ರೀಯ ಮಟ್ಟದಲ್ಲೂ ಇದು ಸದ್ದು ಮಾಡಿದೆ.

ಅಣ್ಣಪ್ಪ ಸ್ವಾಮಿ ಮತ್ತು ಮಂಜುನಾಥ ಸ್ವಾಮಿಗೆ ಕೋಟ್ಯಂತರ ಭಕ್ತರಿದ್ದಾರೆ. ಹೀಗಿದ್ದರೂ ದೂರು ಕೊಟ್ಟ ವ್ಯಕ್ತಿಯ ಹಿನ್ನೆಲೆ, ಅವರ ಹಿಂದೆ ಯಾರಿದ್ದಾರೆ ಎಂಬುದನ್ನು ತಿಳಿದು ತನಿಖೆಯ ಬಗ್ಗೆ ನಿರ್ಧಾರ ಮಾಡಬಹುದಿತ್ತು. ಆತುರದಿಂದ ಎಸ್ಐಟಿ ರಚನೆಯ ತೀರ್ಮಾನವನ್ನು ಮುಖ್ಯಮಂತ್ರಿ ಮಾಡಿದ್ದಾರೆ ಎಂದು ದೂರಿದರು.

ಧರ್ಮಸ್ಥಳದ ವಿರುದ್ಧದ ಷಡ್ಯಂತ್ರದಲ್ಲಿ ಯಾರೆಲ್ಲ ಇದ್ದಾರೆ ಎಂಬುದು ಬಹಿರಂಗವಾಗಬೇಕು. ಎಸ್ಐಟಿ ತನಿಖೆಗೆ ಒತ್ತಡ ಹೇರಿರುವವರ ಹೆಸರು ಬಯಲಾಗಬೇಕು ಎಂದು ಒತ್ತಾಯಿಸಿದರು.

ಸೆ. 1 ಧರ್ಮ ಸಮಾವೇಶ

ಧರ್ಮಸ್ಥಳದ ವಿರುದ್ಧ ಅಪಪ್ರಚಾರ ನಡೆಸುತ್ತಿರುವುದನ್ನು ಖಂಡಿಸಿ ಸೆ. 1 ರಂದು ಬಿಜೆಪಿ ಧರ್ಮಸ್ಥಳ ಚಲೋ ನಡೆಸಿ ಅದೇ ದಿನ ಬೃಹತ್ ಸಮಾವೇಶವನ್ನೂ ಧರ್ಮಸ್ಥಳದಲ್ಲಿ ನಡೆಸಲಿದೆ ಎಂದರು.


ಸರ್ಕಾರದ ನೀತಿ–ನಿಲುವಿನಿಂದ ಹಿಂದೂ ಸಮಾಜಕ್ಕೆ ಧಕ್ಕೆಯಾಗಿದೆ. ಹಾಗಾಗಿ. ಸೆ. 1 ರಂದು ಧರ್ಮಸ್ಥಳದಲ್ಲಿ ನಡೆಯಲಿರುವ ಬೃಹತ್ ಸಮಾವೇಶಕ್ಕೆ ಎಲ್ಲ ಕಡೆಯಿಂದ ಹಿಂದೂ ಸಮಾಜದವರು ಭಾಗವಹಿಸಬೇಕು ಎಂದು ಅವರು ಮನವಿ ಮಾಡಿದರು.

ಧರ್ಮಸ್ಥಳದಲ್ಲಿ ನಡೆಯುತ್ತಿರುವ ಈ ಸಮಾವೇಶ ಪಕ್ಷಾತೀತ ಸಮಾವೇಶವಾಗಿದೆ. ಧರ್ಮದ ಉಳಿವಿಗೆ ಈ ಸಮಾವೇಶ ನಡೆಯಲಿದೆ ಎಂದರು.

ಸುದ್ದಿ ಮತ್ತು ಜಾಹೀರಾತಿಗಾಗಿ ಸಂಪರ್ಕಿಸಿ
9743497111 9743496111

## ಸಿಯಾತಲಾಬ್ ಮೆಹರುನ್ನೀಸಾ ಬೇಗಂ ಕಾಣೆ ಪತ್ತೆಗೆ ಮನವಿ

**ಯುವ ಮಾರ್ಗ ಸುದ್ದಿ**



**ರಾಯಚೂರು,ಆ.25–** ನಗರದ ಸದರ್ ಬಜಾರ್ ಪೊಲೀಸ್ ಠಾಣೆ ವ್ಯಾಪ್ತಿಯ ಸಿಯಾತಲಾಬ್ ನಿವಾಸಿಯಾದ ಮೆಹರುನ್ನೀಸಾ ಬೇಗಂ ಗಂಡ ಮಹೆಬೂಬ್ ವಯಸ್ಸು (39) ಎಂಬ ಮಹಿಳೆಯು ಜೂನ್ 26ರ ರಾತ್ರಿ 8ಕ್ಕೆ ಮನೆಯಿಂದ ಹೊರಗಡೆ ಹೋದವಳು ಮರಳಿ ಮನೆಗೆ ಬಾರದೆ ಕಾಣೆಯಾಗಿದ್ದು, ಈ ಕುರಿತು ಸದರ ಬಜಾರ ಪೊಲೀಸ್‌ಠಾಣೆಯ ಗುನ್ನೆ ನಂಯ್ಯೆ: 65/2025 ಕಲಂರಡಿ ಪ್ರಕರಣ ದಾಖಲಾಗಿದೆ.

ಮಹಿಳೆಯ ಚಹರೆ: ಸಾಧಾರಣ ಮೈಕಟ್ಟು, ಗೋಧಿ ಮೈ ಬಣ್ಣ, ತಲೆಯಲ್ಲಿ ಕಪ್ಪು ಕೂದಲು, 4.6 ಅಡಿ ಎತ್ತರ ಹೊಂದಿದ್ದು,ಪಿಂಕ್ ಬಣ್ಣದ ಪಂಜಾಬಿ ಡ್ರೆಸ್ ಮತ್ತು ಕಪ್ಪು ಬಣ್ಣದ ಬುರ್ಖಾ ಧರಿಸಲಾಗಿದ್ದು, ಕನ್ನಡ, ಉರ್ದು ಹಾಗೂ ಹಿಂದಿ ಭಾಷೆ ಮಾತನಾಡುತ್ತಾಳೆ.

ಈ ಮಹಿಳೆಯ ಬಗ್ಗೆ ಸುಳಿವು ಸಿಕ್ಕಲ್ಲಿ ಸದರ ಬಜಾರ ಪೊಲೀಸ್ ಠಾಣೆ ದೂರವಾಣಿ ಸಂಖ್ಯೆ: 08532–226148 ಅಥವಾ ಅರಕ್ಷಕ ನಿರೀಕ್ಷಕರು ಸದರ್ ಬಜಾರ್ ಪೊಲೀಸ್ ಠಾಣೆ ದೂರವಾಣಿ ಸಂಖ್ಯೆ; 9480803830ಗೆ ಮಾಹಿತಿ ನೀಡುವಂತೆ ಸದರ ಬಜಾರ್ ಪೊಲೀಸ್ ಠಾಣೆಯ ಅಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ವ್ಯಕ್ತಿ ಕಾಣೆ; ಪತ್ತೆಗೆ ಪೊಲೀಸರ ಮನವಿ

**ಯುವ ಮಾರ್ಗ ಸುದ್ದಿ**



**ರಾಯಚೂರು,ಆ.25–**ಇಲ್ಲಿನ ಸದರ್ ಬಜಾರ್ ಪೊಲೀಸ್ ಠಾಣೆ ವ್ಯಾಪ್ತಿಯ ಎಮ್.ಎಮ್ ಕಾಲೋನಿಯ ನಿವಾಸಿಯಾದ ಎಸ್.ಕೆ.ಪೀರ್ ತಂದೆ ಅಬ್ದುಲ್ ಖಾದರ್ (58) ಎಂಬ ವ್ಯಕ್ತಿಯು 2025ರ ಏಪ್ರೀಲ್,11 ರಂದು ಮಧ್ಯಾನ 12 ಗಂಟೆಗೆ ಕೆಲಸದ ನಿಮಿತ್ಯ ನಗರದ ಹೆಡ್ ಪೋಸ್ಟ್ ಆಫೀಸ್‌ಗೆ ಹೋಗಿ ಕೆಲಸ ಮುಗಿದ ನಂತರ ಸೆಂಟ್ರಲ್ ಬ್ಯಾಂಕಿಗೆ ಹೋಗಿ ಬರುತ್ತೇನೆ ಎಂದು ಹೇಳಿ ಹೋದವರು ಮರಳಿ ಮನೆಗೆ ಬಾರದೆ ಕಾಣೆಯಾಗಿದ್ದು, ಈ ಕುರಿತು ಸದರ್ ಬಜಾರ್ ಪೊಲೀಸ್ ಠಾಣೆಯಲ್ಲಿ ಗುನ್ನೆ ಸಂಖ್ಯೆ: 38/2025 ಕಲಂ ವ್ಯಕ್ತಿ ಕಾಣೆಯಡಿಯಲ್ಲಿ ಪ್ರಕರಣ ದಾಖಲಾಗಿದೆ.

ವ್ಯಕ್ತಿಯ ಚಹರೆ: ಸಧೃಡ ಮೈಕಟ್ಟು, ಕೆಂಪು ಮೈ ಬಣ್ಣ, ತಲೆಯಲ್ಲಿ ಕಪ್ಪು ಕೂದಲು 5.6 ಅಡಿ ಎತ್ತರ, ಬಿಳಿ ಬಣ್ಣದ ಅಂಗಿ ಮತ್ತು ಲುಂಗಿ ಧರಿಸಲಾಗಿದ್ದು, ಕನ್ನಡ, ಉರ್ದು, ಹಿಂದಿ ಹಾಗೂ ತೆಲುಗು ಭಾಷೆ ಮಾತನಾಡುತ್ತಾನೆ.

ಈ ವ್ಯಕ್ತಿಯ ಬಗ್ಗೆ ಸುಳಿವು ಸಿಕ್ಕಲ್ಲಿ ಸದರ್ ಬಜಾರ್ ಪೊಲೀಸ್ ಠಾಣೆ ದೂರವಾಣಿ ಸಂಖ್ಯೆ:08532–226148, ಸದರ್ ಬಜಾರ್ ಪೊಲೀಸ್ ಠಾಣೆಯ ಅರಕ್ಷಕ ನಿರೀಕ್ಷಕರ ದೂರವಾಣಿ ಸಂಖ್ಯೆ:9480803830, ಅಥವಾ ರಾಯಚೂರು ನಗರ ಪೊಲೀಸ್ ಕಂಟ್ರೋಲ್ ರೂಂ: 9480803830ಗೆ ಸಂಪರ್ಕ ಮಾಡಬಹುದಾಗಿದೆ ಎಂದು ಸದರ್ ಬಜಾರ್ ಪೊಲೀಸ್ ಠಾಣೆಯ ಅರಕ್ಷಕ ನಿರೀಕ್ಷಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಜೆಸ್ಕಾಂನಿಂದ ಆಗಸ್ಟ್ 28ರಂದು ವಿದ್ಯುತ್ ವ್ಯತ್ಯಯ

**ರಾಯಚೂರು,ಆ.25–** ಇಲ್ಲಿನ ಜೆಸ್ಕಾಂ ಕಾರ್ಯ ಮತ್ತು ಪಾಲನೆ ಗ್ರಾಮೀಣ ಉಪ ವಿಭಾಗದ ವ್ಯಾಪ್ತಿಗೆ ಬರುವ 110/11 ಕೆವಿ ಮಟಮಾರಿ ವಿದ್ಯುತ್ ಉಪ ಕೇಂದ್ರದಲ್ಲಿ ತುರ್ತು ನಿರ್ವಹಣಾ ಕಾರ್ಯ ಹಮ್ಮಿಕೊಂಡ ಪ್ರಯುಕ್ತ ಆಗಸ್ಟ್ 28ರ ಬೆಳಗ್ಗೆ 10ಗಂಟೆಯಿಂದ ಸಂಜೆ 05 ಗಂಟೆವರೆಗೆ ವಿದ್ಯುತ್ ಪೂರೈಕೆಯಲ್ಲಿ ವ್ಯತ್ಯಯವಾಗಲಿದ್ದು, ವಿದ್ಯುತ್ ಗ್ರಾಹಕರು ಸಹಕರಿಸುವಂತೆ ಜೆಸ್ಕಾಂ ಕಾರ್ಯ ಮತ್ತು ಪಾಲನೆ ಗ್ರಾಮೀಣ ಉಪ ವಿಭಾಗದ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## 2.90 ಲಕ್ಷ ರೂ.ನಗನಾಣ್ಯ ಕಳವು

**ಕಲಬುರಗಿ,ಆ.25–**ಮನೆ ಹಿಂಬಾಗಿಲು ಮುರಿದು 2.90 ಲಕ್ಷ ರೂ.ಮೌಲ್ಯದ ನಗನಾಣ್ಯ ಕಳವು ಮಾಡಿರುವ ಘಟನೆ ಅಫಜಲಪುರ ಕ್ರಾಸ್ ಹತ್ತಿರದ ಪಾರ್ವತಿ ಲೇಔಟ್‌ನಲ್ಲಿ ನಡೆದಿದೆ.

ಶರಣಬಸಪ್ಪ ಚೌದರಿ ಎಂಬುವವರ ಮನೆ ಬೀಗ ಮುರಿದು ಕಳ್ಳರು 1 ಲಕ್ಷ ರೂ.ನಗದು ಹಣ, 60 ಸಾವಿರ ರೂ.ಮೌಲ್ಯದ 15 ಗ್ರಾಂ.ಬಂಗಾರದ ಲಾಕೇಟ್, 60 ಸಾವಿರ ರೂ.ಮೌಲ್ಯದ 15 ಗ್ರಾಂ.ಬಂಗಾರದ ಸುತ್ತುಂಗುರುಗಳು, 20 ಸಾವಿರ ರೂ.ಮೌಲ್ಯದ 5 ಗ್ರಾಂ.ಬಂಗಾರದ ಕಿವಿಯೋಲೆ, 15 ಸಾವಿರ ರೂ.ಮೌಲ್ಯದ 3 ಗ್ರಾಂ.ಬಂಗಾರದ ಉಂಗುರ, 20 ಸಾವಿರ ರೂ.ಮೌಲ್ಯದ 5 ಗ್ರಾಂ.ಬಂಗಾರದ ಕಾಯಿನ್, 15 ಸಾವಿರ ರೂ.ಮೌಲ್ಯದ ಬೆಳ್ಳಿ ಬೆಳ್ಳಿ ಸಾಮಾನುಗಳು ಸೇರಿ 2.90 ಲಕ್ಷ ರೂ.ಮೌಲ್ಯದ ನಗನಾಣ್ಯ ಕಳವು ಮಾಡಿದ್ದಾರೆ. ಅಶೋಕ ನಗರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು, ತನಿಖೆ ನಡೆದಿದೆ.

# ಶ್ರಾವಣ ಮಾಸದ ಅಂಗವಾಗಿ ಹರವಿ ಶ್ರೀಬಸವೇಶ್ವರನಿಗೆ ವಿಶೇಷ ಪೂಜೆ

**ಯುವ ಮಾರ್ಗ ಸುದ್ದಿ**



**ಮಾನ್ವಿ,ಆ.25–** ತಾಲೂಕಿನ ಹರವಿ ಗ್ರಾಮದ ಶ್ರೀ ಬಸವೇಶ್ವರ ದೇವಸ್ಥಾನದಲ್ಲಿ ಶ್ರಾವಣ ಮಾಸದ ಅಂಗವಾಗಿ ನಡೆದ ಹುಬ್ಬಳ್ಳಿಯ ಶ್ರೀ ಸಿದ್ದಾರೂಢರ ಮಹಾ ಪುರಾಣ ಪ್ರವಚನದ ಮಹಾಮಂಗಲ ಮಹೋತ್ಸವ ಕಾರ್ಯಕ್ರಮದ ದಿವ್ಯಾಸಾನಿಧ್ಯವನ್ನು ವಹಿಸಿ ಚೀಕಲಪರ್ವಿಯ ಶ್ರೀಸದಾಶಿವ ಮಹಾಸ್ವಾಮಿಗಳು ಆರ್ಶೀವಚನ ನೀಡಿ ಪ್ರತಿ ವ್ಯಕ್ತಿ ಕೂಡ ತನ್ನನ್ನು ತಾನು ಸಮಾಜಕ್ಕೆ ಯಾವರೀತಿಯಲ್ಲಿ ಸಂಪೂರ್ಣವಾಗಿ ಅರ್ಪಿಸಿಕೊಳ್ಳಬೇಕು ಎನ್ನುವುದು ನಮಗೆ ಪುರಾಣ ಪ್ರವಚನಗಳಲ್ಲಿನ ಮಹಾತ್ಮರ ಸಂತರ ,ಮಹಾನಿಯರ ಜೀವನ ತತ್ವಗಳನ್ನು ಅಲಿಸಿದಾಗ ತಿಳಿಯುತ್ತದೆ. ಹುಬ್ಬಳ್ಳಿಯ ಶ್ರೀಸಿದ್ದಾರೂಢರು ತಮ್ಮ ವಿಶಿಷ್ಟವಾದ ತತ್ವಗಳಿಂದ ಜನರ ಜೀವನವನ್ನು ಅದಾರ್ಶಮಯವಾಗಿ ಹೇಗೆ ಕಟ್ಟಿಕೊಳ್ಳಬಹುದು ಜೀವನದಲ್ಲಿ ಅಧ್ಯಾತ್ಮವನ್ನು ಹೇಗೆ ಅಳವಡಿಸಿಕೊಳ್ಳಬಹುದು ಎನ್ನುವುದನ್ನು ನಮಗೆ ತಿಳಿಸಿ ಕೊಟ್ಟಿದ್ದಾರೆ ಎಂದು ತಿಳಿಸಿದರು.

ಮಾನ್ವಿ ಕಲ್ಮಠದ ಶ್ರೀ ವಿರೂಪಾಕ್ಷ ಪಂಡಿತಾರಾಧ್ಯ ಶಿವಾಚಾರ್ಯ ಮಹಾಸ್ವಾಮಿಗಳು ಆರ್ಶೀವಚನ ನೀಡಿ ಹರವಿ ಬಸವೇಶ್ವರ ಮಹಿಮಾನ್ವಿತ ದೇವರಾಗಿದ್ದು ಭಕ್ತಿಯಿಂದ ಬೇಡಿದ ಭಕ್ತರಿಗೆ ಅನುಗ್ರಹವನ್ನು ನೀಡಿ ಹರಿಸುತ್ತನೆ ಮುಂಬರುವ ದಸಾರ ಹಬ್ಬವು ವಿಶೇಷವಾಗಿದ್ದು ಕಲ್ಮಠದಿಂದ 50 ನೇ ವರ್ಷದ ಸುವಣರ್ಮಹೋತ್ಸವ ದಸಾರ ಕಾರ್ಯಕ್ರಮಕ್ಕೆ ಹೆಚ್ಚಿನ ಸಂಖ್ಯೆಯಲ್ಲಿ ಗ್ರಾಮದ ಭಕ್ತರು ಭಾಗವಹಿಸುವಂತೆ ಕರೆ ನೀಡಿದರು.

ಹುಬ್ಬಳ್ಳಿಯ ಶ್ರೀ ಸಿದ್ದಾರೂಢರ ಮಹಾಪುರಣ ಪ್ರವಚನವನ್ನು ಶ್ರೀ ಅಮರೇಶ್ವರ ಶಾಸ್ತ್ರಿ ಸಾಲಿಮಠ ನೀಡಿದರು ತಬಲಸಾಥ್ ಸುರೇಶಕುಮಾರ ನೀಡಿದರು,ಸಂಗೀತವನ್ನು ರವಿಕುಮಾರ ಗವಾಯಿಗಳು ನೀಡಿದರು.


ದೇವಸ್ಥಾನದಲ್ಲಿ ಭಕ್ತರಿಗೆ ವಿಶೇಷವಾಗಿ ಜೋಳದಿಂದ ತಯಾರಿಸಿದ ಅಂಬಲಿಯನ್ನು ಪ್ರಸಾದ ರೂಪದಲ್ಲಿ ನೀಡಲಾಯಿತು ಹಾಗೂ ಭಕ್ತರಿಗೆ ಆನ್ನದಾಸೋಹದ ವ್ಯವಸ್ಥೆಯನ್ನು ಹರವಿ ಶ್ರೀ ಬಸವೇಶ್ವರ ದೇವಸ್ಥಾನ ಸೇವಾ ಟ್ರಸ್ಟ್ ವತಿಯಿಂದ ಮಾಡಲಾಯಿತು.

ಶ್ರಾವಣ ಮಾಸದ ಅಂಗವಾಗಿ ಶ್ರೀ ಬಸವೇಶ್ವರ ಮೂರ್ತಿಗೆ ಹಾಗೂ ಶ್ರೀ ವೀರಭದ್ರೇಶ್ವರ ಮೂರ್ತಿಗೆ, ಈಶ್ವರ ಲಿಂಗಕ್ಕೆ ವಿಶೇಷ ಅಭಿಷೇಕ ಹಾಗೂ ಪೂಜೆಯನ್ನು ಮಾಡಲಾಯಿತು.

ಹರವಿ ಗ್ರಾಮದಿಂದ ಶ್ರೀ ಹರವಿ ಬಸವೇಶ್ವರ ದೇವಸ್ಥಾನದವರೆಗೂ ನಡೆದ ಶ್ರೀ ಹರವಿ ಬಸವೇಶ್ವರ ಭಾವಚಿತ್ರ ಮೆರವಣಿಗೆಯಲ್ಲಿ ಗ್ರಾಮದ ನೂರಾರು ಮಹಿಳೆಯರು ಕಳಸ ಮತ್ತು ಕುಂಭದೊಂದಿಗೆ ಭಾಗವಹಿಸಿದರು.ಜೆ.ಬಿ.ಹಳ್ಳಿಯ ಶ್ರೀ ಭದ್ರಕಾಳಿ ಸಮೇತ ಶ್ರೀ ವೀರಭದ್ರೇಶ್ವರ ವೀರಗಾಸಿ ಕಲಾ ತಂಡದ ಕಲಾವಿದರಾದ ಮೋಹನ್ ಮತ್ತು ವೈಷ್ಣವ್ ರವರ ವೀರಗಾಸಿ ಕಲಾ ಪ್ರದರ್ಶನ ಮೆರವಣಿಗೆಯ ಪ್ರಮುಖ ಆಕರ್ಷಣೆಯಾಗಿತ್ತು.

## ಮೀಸಲು ಕ್ಷೇತ್ರಕ್ಕೆ ನೀವು ಮಲತಾಯಿ ಧೋರಣೆ, ಸರ್ಕಾರದ ವಿರುದ್ಧ ಗುಡುಗಿದ : .ಶಾಸಕ ಮಾನಪ್ಪ ವಜ್ಜಲ್

**ಯುವ ಮಾರ್ಗ ಸುದ್ದಿ**



**ಲಿಂಗಸುಗೂರು : ನಮ್ಮ ತಾಲೂಕಿಗೆ ಕೊಟ್ಟ 200 ಹಾಸಿಗೆಯ ಆಸ್ಪತ್ರೆ ಕಿತ್ತುಕೊಂಡು ನಮಗೆ ಮಲತಾಯಿ ದೋರಣೆ ತೋರಿದ್ದಿರಿ,ಇಲ್ಲಿಗೆ ಪ್ರತಿ ದಿನ ಸಾವಿರಾರು ಬಡ ರೋಗಿಗಳು ಬರುತ್ತಿದ್ದಾರೆ.ಈವಾಗಿರುವ 100 ಹಾಸಿಗೆಯಲ್ಲಿ ಆಸ್ಪತ್ರೆಯಲ್ಲಿ ತಜ್ಞ ವೈದ್ಯರು ಇಲ್ಲ, ನಮಗೆ ತಜ್ಞ ವೈದ್ಯರನ್ನು ಕೊಡಿ ಎಂದು ಶಾಸಕ ಮಾನಪ್ಪ ವಜ್ಜಲ್ ವಿಧಾನಸಭೆಯಲ್ಲಿ ಕ್ಷೇತ್ರದ ಸಮಸ್ಯೆ ತೆರೆದಿಟ್ಟರು.**

**ಬೆಂಗಳೂರಿನಲ್ಲಿ ನೆಡೆದ ಅಧಿವೇಶನದಲ್ಲಿ ಮಾತನಾಡಿ, ಕಾಂಗ್ರೇಸ್ ಸರಕಾರ ಹಿಂದಿನ ಬಜೆಟ್ ನಲ್ಲಿ ಪಟ್ಟಣದ ವಿಭಾಗೀಯ ಆಸ್ಪತ್ರೆಯನ್ನು 200 ಹಾಸಿಗೆಯ ಜಿಲ್ಲಾ ಆಸ್ಪತ್ರೆಯಾಗಿ ಮೆಲ್ದರ್ಜೆಗೇರಿಸುವ ನಿರ್ಣಯವನ್ನು ಘೋಷಣೆ ಮಾಡಿತ್ತು.ತದನಂತರ ರಾಜಕೀಯ ಪ್ರಭಾವಿಗಳ ಒತ್ತಡಕ್ಕೆ ಮಣಿದು, ಲಿಂಗಸುಗೂರಿಗೆ ಘೋಷಣೆ ಮಾಡಿದ್ದ ಆಸ್ಪತ್ರೆಯನ್ನು, ಸಿಂಧನೂರಿಗೆ ಸ್ಥಳಾಂತರಿಸುವ ಮೂಲಕ ಮೀಸಲು ಕ್ಷೇತ್ರದ ಜನತೆಗೆ ದ್ರೋಹ ಮಾಡಿದ್ದೀರಿ.**

**ಜೊತೆಗೆ ಸದ್ಯ ಇರುವ ತಾಲೂಕ ಆಸ್ಪತ್ರೆಗೆ ತಜ್ಞ ವೈದ್ಯರ ಕೊರತೆ ಇದೆ. ನಾನು ಈಗಾಗಲೇ ಕಳೆದ ಅಧಿವೇಶನದಲ್ಲಿ ವೈದ್ಯರ ಕೊರತೆ ಇದೆ ಎಂದು ಹೇಳಿದ್ದೆ, ಆದರೆ ಇವತ್ತಿನ ವರೆಗೂ ನೀವು ನಮಗೆ ವೈದ್ಯರ ಕೊರತೆಯನ್ನು ನಿಗಿಸುವಲ್ಲಿ ವಿಫಲತೆ ಹೊಂದಿದ್ದೀರಾ, ಮೀಸಲು ಕ್ಷೇತ್ರಕ್ಕೆ ಮಲತಾಯಿ ದೋರಣೆ ತೋರುತ್ತಿದ್ದೀರಾ ಎಂದು ಅಧಿವೇಶನದಲ್ಲಿ ತಮ್ಮ ರೋಷವೇಶ ವ್ಯಕ್ತಪಡಿಸಿದರು.**

**ಜೊತೆಗೆ ತಮ್ಮ ಕ್ಷೇತ್ರದ ಆನೆಹೊಸುರು ಆಸ್ಪತ್ರೆಯಲ್ಲಿಯೂ ಕೂಡ ತಜ್ಞ ವೈದ್ಯ,ಸ್ತ್ರಿ ರೋಗ ವೈದ್ಯರು, ಮಕ್ಕಳ ತಜ್ಞರು, ಅರವಳಿಕೆ ತಜ್ಞರನ್ನು ನೇಮಕ ಮಾಡುವಂತೆ ಸದನದಲ್ಲಿ ಧ್ವನಿಯೆತ್ತಿದರು.ಅಷ್ಟೇ ಅಲ್ಲದೆ**

**ಹೆಚ್ಚು ವೈದ್ಯರು ಇರುವ ಜಿಲ್ಲೆಯಿಂದ ನಮ್ಮ ತಾಲುಕಿಗೆ ವೈದ್ಯರನ್ನು ಒದಗಿಸಿ, ಇದರಿಂದ ಸಾವಿರಾರು ರೋಗಿಗಳಿಗೆ ಅನುಕೂಲವಾಗುತ್ತದೆ ಎಂದು ಸರಕಾರವನ್ನು ಒತ್ತಾಯಿಸಿದರು.**

**" ಆಸ್ಪತ್ರೆ ವಿಚಾರದಲ್ಲಿ ಕಾಂಗ್ರೆಸ್ ಸರಕಾರ ಮೀಸಲು ಕ್ಷೇತ್ರವಾದ ಲಿಂಗಸುಗೂರು ತಾಲೂಕಿಗೆ ಮಲತಾಯಿ ಧೋರಣೆ ತೋರುತ್ತಿದ್ದು,ಪದೇ ಪದೇ ಅನ್ಯಾಯ ಮಾಡುತ್ತಿದೆ.ಇದು ಸರಿಯಾದ ಕ್ರಮವಲ್ಲ ನೀವು ಬೇಗ ವೈದ್ಯರನ್ನು ಕೊಡದಿದ್ದರೆ ಕ್ಷೇತ್ರದ ಜನರ ಜೊತೆಗೂಡಿ ಹೋರಾಟಕ್ಕೆ ಇಳಿಯಬೇಕಾಗುತ್ತೆ "**

**–ಶಾಸಕ ಮಾನಪ್ಪ ವಜ್ಜಲ್**

**" ಆರೋಗ್ಯ ಇಲಾಖೆಯಲ್ಲಿ 120 ತಜ್ಞ ವೈದ್ಯರು ಹಾಗೂ 100 ಸಾಮಾನ್ಯ ವೈದ್ಯರ ಕೊರತೆಯಿದೆ.ಆದ್ದರಿಂದ ನಿಮ್ಮಲ್ಲಿರುವ ವೈದ್ಯರನ್ನು ಗುತ್ತಿಗೆ ಆದರದ ಮೇಲೆ ನೀವೇ ನೇಮಕ ಮಾಡಿಕೊಳ್ಳಿ,ಆದಷ್ಟು ಬೇಗ ವೈದ್ಯರ ನೇಮಕ ಮಾಡಿಕೊಂಡು ನಿಮ್ಮ ಸಮಸ್ಯೆ ಬಗೆಹರಿಸುವೆ. "**

**–ದಿನೇಶ ಗುಂಡೂರಾವ್. ಆರೋಗ್ಯ ಸಚಿವ.**

## ಬ್ಯಾಂಕ್ ಮ್ಯಾನೇಜರ್ ಮೇಲೆ ಹಲ್ಲೆ ನಡೆಸಿ ಹಣ, ಚಿನ್ನಾಭರಣ ದರೋಡೆ

**ಕಲಬುರಗಿ,ಆ.25–**ಬ್ಯಾಂಕ್ ಮ್ಯಾನೇಜರ್ ಒಬ್ಬರ ಮೇಲೆ ಹಲ್ಲೆ ನಡೆಸಿ ಹಣ, ಚಿನ್ನಾಭರಣ ದರೋಡೆ ಮಾಡಿರುವ ಘಟನೆ ನಗರದಲ್ಲಿ ನಡೆದಿದೆ.

ಬಾಗಲಕೋಟೆ ಜಿಲ್ಲೆಯ ಬನಹಟ್ಟಿ ತಾಲ್ಲೂಕಿನ ಆಸಂಗಿ ಗ್ರಾಮದಲ್ಲಿರುವ ಬ್ಯಾಂಕ್ ಆಫ್ ಬರೋಡಾದಲ್ಲಿ ಜಾಯಿಂಟ್ ಮ್ಯಾನೇಜರ್ ಆಗಿರುವ ಮಲ್ಲಿಕಾರ್ಜುನ ಕಡೂನ್ ಎಂಬುವವರ ಮೇಲೆ ಹಲ್ಲೆ ನಡೆಸಿ 80 ಸಾವಿರ ರೂ.ಮೌಲ್ಯದ ಬಂಗಾರದ ಚೈನ್, 2,500 ರೂ.ನಗದು ದೋಚಲಾಗಿದೆ.

ಕಡೂನ್ ಅವರು ಬನಹಟ್ಟಿಯಿಂದ ಮಧ್ಯರಾತ್ರಿ 2 ಗಂಟೆ ಸುಮಾರಿಗೆ ಕಲಬುರಗಿಗೆ ಆಗಮಿಸಿ ನಗರದ ಜಗತ್‌ನ ಭೀಮನಗರಕ್ಕೆ ಹೋಗಲು ಸರ್ದಾರ ವಲ್ಲಭಭಾಯಿ ಪಟೇಲ್ ವೃತ್ತದಲ್ಲಿ ಆಟೋಗಾಗಿ ಕಾಯುತ್ತ ನಿಂತಿದ್ದಾರೆ. ಈ ವೇಳೆ ಆಟೋ ಚಾಲಕನೊಬ್ಬ ಇವರ ಬಳಿಗೆ ಬಂದು ಎಲ್ಲಿಗೆ ಹೋಗಬೇಕು ಎಂದು ಕೇಳಿ ಜಗತ್ ಸರ್ಕಲ್‌ಗೆ 20 ರೂಪಾಯಿ ಆಗುತ್ತದೆ ಎಂದಿದ್ದಾನೆ. ಇವರು ಆಟೋದಲ್ಲಿ ಕೂರುವ ಮೊದಲೇ ಒಬ್ಬ ಅಪರಿಚಿತ ವ್ಯಕ್ತಿ ಆಟೋದಲ್ಲಿ ಕುಳಿತಿದ್ದ. ಆಟೋ ಎಸ್.ಬಿ.ಪೆಟ್ರೋಲ್ ಪಂಪ್ ಹತ್ತಿರ ಹೋಗುತ್ತಿದ್ದಂತೆಯೇ ಮತ್ತಿಬ್ಬರು ಆಟೋ ನಿಲ್ಲಿಸಿ ಅದರಲ್ಲಿ ಕುಳಿತಿದ್ದಾರೆ. ಆಗ ಆಟೋ ಚಾಲಕ ಜಗತ್ ಸರ್ಕಲ್‌ಗೆ ಹೋಗುವ ಬದಲು ಸರ್ಕಾರಿ ಆಸ್ಪತ್ರೆ ಕಡೆಗೆ ಆಟೋ ತಿರುಗಿಸಿದ್ದಾನೆ. ಆಗ ಕಡೂನ್ ಅವರು ನಾನು ಜಗತ್‌ಗೆ ಹೋಗಬೇಕು ಎಂದಿದ್ದಾರೆ. ಆಗ ಇವರ ಎಡಕ್ಕೆ ಮತ್ತು ಬಲಕ್ಕೆ ಮತ್ತು ಆಟೋಚಾಲಕನ ಪಕ್ಕದಲ್ಲಿ ಕುಳಿತ ಮೂವರು ವ್ಯಕ್ತಿಗಳು ಹಲ್ಲೆ ನಡೆಸಿ ಚಾಕು ತೋರಿಸಿ ಜೀವ ಬೆದರಿಕೆ ಹಾಕಿ ಬಂಗಾರ ಮತ್ತು ಹಣ ದೋಚಿದ್ದಾರೆ. ಆ ನಂತರ ಇವರನ್ನು ಆಟೋದಿಂದ ಕೆಳಗಡೆ ನೂಕಿ ಆಟೋ ತೆಗೆದುಕೊಂಡು ಪರಾರಿಯಾಗಿದ್ದಾರೆ. ಈ ಸಂಬಂಧ ಬ್ರಹ್ಮಪುರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

## ಜೆಸ್ಕಾಂ ನಗರ–01: ಇಂದು ವಿದ್ಯುತ್ ವ್ಯತ್ಯಯ

**ರಾಯಚೂರು,ಆ.25–**ಇಲ್ಲಿನ ಜೆಸ್ಕಾಂ ಕಾರ್ಯ ಮತ್ತು ಪಾಲನೆ ಉಪ ವಿಭಾಗ–1ರಲ್ಲಿ ಗಣೇಶ ಹಬ್ಬದ ಮೆರವಣಿಗೆ ಮತ್ತು ಈದ್ ಮಿಲಾದ್ ಹಬ್ಬದ ಅಂಗವಾಗಿ 11ಕೆವಿ ಮಾರ್ಗ ಹಾಗೂ ವಿದ್ಯುತ್ ಪರಿವರ್ತಕ ದುರಸ್ತಿ ಕಾಮಗಾರಿ ಮತ್ತು ರಿ–ಕಂಡಕ್ಟರಿಂಗ್ ನಿರ್ವಹಿಸುತ್ತಿರುವ ಪ್ರಯುಕ್ತ ಆಗಸ್ಟ್ 26ರ ಬೆಳಿಗ್ಗೆ 10ರಿಂದ ಸಂಜೆ 6ಗಂಟೆಯವರೆಗೆ ವಿದ್ಯುತ್ ಪೂರೈಕೆಯಲ್ಲಿ ವ್ಯತ್ಯಯ ಉಂಟಾಗಲಿದ್ದು, ವಿದ್ಯುತ್ ಗ್ರಾಹಕರು ಸಹಕರಿಸುವಂತೆ ಕೋರಲಾಗಿದೆ.

ಬೆಳಿಗ್ಗೆ 10ರಿಂದ ಜೈನ್ ಮಂದಿರ, ಭೂ ಭವನ, ಉಷಾ ಲ್ಯಾಬ್, ಕಂದಕಡ್ಡೆ ಮಾರೆಮ್ಮಗುಡಿ, ತರಕಾರಿ ಮಾರುಕಟ್ಟೆ ಹಿಂಬಾಗ, ಹಳೆ ಹಮ್‌ದರದ್ ಶಾಲೆ, ಮಡಿವಾಳ ಓಣಿ ಸೇರಿದಂತೆ ಸುತ್ತಮುತ್ತಲಿನ ಪ್ರದೇಶಗಳಲ್ಲಿ ವಿದ್ಯುತ್ ವ್ಯತ್ಯಯವಾಗಲಿದೆ.

ಹೆಚ್ಚಿನ ಮಾಹಿತಿಗಾಗಿ ದೂರವಾಣಿ ಸಂಖ್ಯೆ: 08532–226386, 08532–231999ಗೆ ಸಂಪರ್ಕ ಮಾಡಬಹುದಾಗಿದೆ ಎಂದು ಜೆಸ್ಕಾಂ ಕಾರ್ಯ ಮತ್ತು ಪಾಲನೆ ಉಪ ವಿಭಾಗ–1ರ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಜೆಸ್ಕಾಂ ನಗರ: ಇಂದು ವಿದ್ಯುತ್ ವ್ಯತ್ಯಯ

**ರಾಯಚೂರು,ಆ.25–**ಇಲ್ಲಿನ ಜೆಸ್ಕಾಂ ಕಾರ್ಯ ಮತ್ತು ಪಾಲನೆ ನಗರ ವಿಭಾಗದ 33ಕೆ.ವಿ ಪವರ್‌ಗ್ರಿಡ್ ವಿದ್ಯುತ್ ಮಾರ್ಗ ಸ್ಥಳಾಂತರ ಕಾಮಗಾರಿ ಕೈಗೊಂಡ ದ ಆಗಸ್ಟ್ 26ರ ಬೆಳಗ್ಗೆ 11 ಗಂಟೆಯಿಂದ ಮಧ್ಯಾಹ್ನ 03 ಗಂಟೆವರೆಗೆ ವಿದ್ಯುತ್ ಪೂರೈಕೆಯಲ್ಲಿ ವ್ಯತ್ಯಯ ಉಂಟಾಗಲಿದ್ದು, ವಿದ್ಯುತ್ ಗ್ರಾಹಕರು ಸಹಕರಿಸುವಂತೆ ಕೋರಲಾಗಿದೆ.

ಅಂದು ಬೆಳಿಗ್ಗೆ 11ಗಂಟೆಯಿಂದ ಡುಂಬಾ ಕಾಲೋನಿ, ಸಿಟಿ ಕ್ಲಬ್, ಅಲ್ಲಿನಾಯಕ್ ಕಾಲೋನಿ, ಗುರು ಬಸವ ಕಾಲೋನಿ, ಕಾಕತೀಯ ಕಾಲೋನಿ, ಶಾಂತಿ ಕಾಲೋನಿ, ಡಾಲರ್ಸ ಕಾಲೋನಿ, ರಾಯಚೂರು ಒಳ ಚರಂಡಿ ನೀರು ಮತ್ತು ಸಂಬಂಧಿಸಿದ ಪ್ರದೇಶಗಳು ಸೇರಿದಂತೆ ಸುತ್ತಮುತ್ತಲ್ಲಿನಲ್ಲಿ ವಿದ್ಯುತ್ ವ್ಯತ್ಯಯವಾಗಲಿದೆ.

ಹೆಚ್ಚಿನ ಮಾಹಿತಿಗಾಗಿ ಗ್ರಾಹಕರ ಸೇವಾ ಕೇಂದ್ರದ ದೂರವಾಣಿ ಸಂಖ್ಯೆ: 08532–226386, 08532–231999ಗೆ ಸಂಪರ್ಕ ಮಾಡಬಹುದಾಗಿದೆ ಎಂದು ಜೆಸ್ಕಾಂ ಕಾರ್ಯ ಮತ್ತು ಪಾಲನೆ ನಗರ ವಿಭಾಗದ ಕಾರ್ಯನಿರ್ವಾಹಕ ಅಭಿಯಂತರರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಅಂಗನವಾಡಿ ಅಕ್ಷೇಪಣೆಗೆ ಅರ್ಜಿ ಆಹಾನ

**ರಾಯಚೂರು,ಆ.25–**ಜಿಲ್ಲೆಯ ಮಾನವಿ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ವ್ಯಾಪ್ತಿಯಲ್ಲಿ 2025–26ನೇ ಸಾಲಿಗೆ ಅಂಗನವಾಡಿ ಕಾರ್ಯಕರ್ತೆ–01 ಮತ್ತು ಸಹಾಯಕಿಯರು–12 ಖಾಲಿ ಹುದ್ದೆಗಳಿಗೆ ಜಿಲ್ಲಾ ಆಯ್ಕೆ ಸಮಿತಿಯಿಂದ ಅರ್ಹ ಅಭ್ಯರ್ಥಿಗಳ ತಾತ್ಕಾಲಿಕ ಆಯ್ಕೆ ಪಟ್ಟಿ ಪ್ರಕಟಿಸಲಾಗಿದ್ದು, ಅಕ್ಷೇಪಣೆಗೆ ಅರ್ಜಿ ಆಹ್ವಾನಿಸಲಾಗಿದೆ.

ಪೋತ್ನಾಳ ಅಂವಾನವಾಡಿ ಕೇಂದ್ರ–08ರಲ್ಲಿ ಕಾರ್ಯಕರ್ತೆಯರ ಹುದ್ದೆಗೆ ಸಾನೀಯಾ ಬೇಗಂ ತಂದೇ ಶೇಖರ್ ಮುನೀರ್ ಇವರು ತಾತ್ಕಾಲಿಕವಾಗಿ ಆಯ್ಕೆ ಮಾಡಲಾಗಿದೆ. ಅಲ್ಲದೆ ಅಂಗನವಾಡಿ ಸಹಾಯಕಿಯರ ಹುದ್ದೆಗೆ ಮಾನವಿ ಪುರಸಭೆಯ ವಾರ್ಡ ನಂ–01ರ ಜಯನಗರ ಅಂಗನವಾಡಿ ಕೇಂದ್ರಕ್ಕೆ ಪಲ್ಲವಿ ತಂದೆ ಮಹಾದೇವಪ್ಪ, ಮಾನವಿ ಪುಸರಭೆ ವಾರ್ಡ ನಂ–03ರ ವಿಠ್ಠಲ ನಗರ ಅಂಗನವಾಡಿ ಕೇಂದ್ರಕ್ಕೆ ನಾಗಮ್ಮ ತಂದೆ ಪಾಂಡು ನಾಯಕ, ಪೋತ್ನಾಳ ಅಂಗನವಾಡಿ ಕೇಂದ್ರ–9ಕ್ಕೆ ಸಂಗೀತಾ ತಂದೆ ಸೂಗಪ್ಪ, ಪೋತ್ನಾಳ ಅಂಗನವಾಡಿ ಕೇಂದ್ರ–7ಕ್ಕೆ ಸಂಗೀತಾ ತಂದೆ ಸೂಗಪ್ಪ, ಕುರ್ಡಿ ಅಂಗನವಾಡಿ ಕೇಂದ್ರ–9ಕ್ಕೆ ದುರ್ಗಿ ಆರ್. ತಂದೆ ರಂಗಪ್ಪ, ಗೋರ್ಕಲ್ ಜೂಕೂರು ಅಂಗನವಾಡಿ ಕೇಂದ್ರ–2ಕ್ಕೆ ನಾಗಮ್ಮ ತಂದೆ ಹನುಮಯ್ಯ, ಅರೋಲಿ ಅಂಗನವಾಡಿ ಕೇಂದ್ರ–1ಕ್ಕೆ ಬಸಲಿಂಗಮ್ಮ ತಂದೆ ಸಿದ್ದಪ್ಪ, ಮದ್ಲಾಪೂರು ಅಂಗನವಾಡಿ ಕೇಂದ್ರ–1ಕ್ಕೆ ಮಂಜುಳಾ ತಂದೆ ಶಿವಬಸಯ್ಯ, ಮದ್ಲಾಪೂರು ಅಂಗನವಾಡಿ ಕೇಂದ್ರ–2ಕ್ಕೆ ಶ್ವೇತಾ ತಂದೆ ಮಹಾದೇಪ್ಪ, ಸಾದಾಪೂರು ಕೋರವಿ ಅಂಗನವಾಡಿ ಕೇಂದ್ರ–3ಕ್ಕೆ ಕಾವೇರಿ ಟಿ ತಂದೆ ವೆಂಕಟೇಶ ಕೆ., ಅರೋಲಿ ರಾಜೋಳ್ಳಿ ಅಂಗನವಾಡಿ–1ಕ್ಕೆ ಚಾಮುಂಡಿ ತಂದೆ ಸಣ್ಣ ಭೀಮಯ್ಯ ಗೊಸಿಬತ್ತು, ಅರೋಲಿ ರಾಜೋಳ್ಳಿ ಅಂಗನವಾಡಿ ಕೇಂದ್ರ–5ಕ್ಕೆ ಅನುಸೂಯ ತಂದೆ ಹನುಮಪ್ಪ ಕರೆಗುಡ್ಡ ಇವರು ತಾತ್ಕಾಲಿಕವಾಗಿ ಆಯ್ಕೆಯಾಗಿದ್ದು, ಈ ತಾತ್ಕಾಲಿಕ ಆಯ್ಕೆಪಟ್ಟಿಗೆ ಅಕ್ಷೇಪಣೆ ಅರ್ಜಿ ಸಲ್ಲಿಸುವವರು ಸೂಕ್ತ ದಾಖಲಾತಿಗಳೊಂದಿಗೆ ಆಗಸ್ಟ್ 30ರ ಸಂಜೆ 5.30ರೊಳಗೆ ಶಿಶು ಅಭಿವೃಧ್ಧಿ ಯೋಜನಾಧಿಕಾರಿಗಳು ಮಾನವಿ ಅವರಿಗೆ ಅರ್ಜಿ ಸಲ್ಲಿಸಬಹುದಾಗಿದೆ. ಆಕ್ಷೇಪಣೆ ಸಲ್ಲಿಸುವವರು ಆಕ್ಷೇಪಣೆ ಅರ್ಜಿಯ ಜೊತೆಗೆ ಯಾವುದೇ ದಾಖಲಾತಿಗಳು ಸಲ್ಲಿಸದಿದ್ದಲ್ಲಿ ಅಂತಹವರ ಅಕ್ಷೇಪಣೆ ಅರ್ಜಿಗಳನ್ನು ಪರಿಗಣಿಸಲಾಗುವುದಿಲ್ಲ.

ಹೆಚ್ಚಿನ ಮಾಹಿತಿಗಾಗಿ ಶಿಶು ಅಭಿವೃದ್ದಿ ಯೋಜನಾಧಿಕಾರಿಗಳ ಕಾರ್ಯಾಲಯ ಮಾನವಿ ಅವರನ್ನು ಸಂಪರ್ಕಿಸುವಂತೆ ಮಾನವಿ ಶಿಶು ಅಭಿವೃದ್ದಿ ಯೋಜನಾಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

Owned, Printed and published by ANILKUMAR H from Plot No. # 3-5-415/-A MANVI Pooja Rice Mill, Near Kataraki Road, Manvi Tq. Manvi, Dist, Raichur-584123, Printed at MAA FRIENDS PRINTING PRESS, Plot No. # 3-5-415/-A Pooja Rice Mill Near Kataraki Road, Manvi Tq. Manvi, Dist: Raichur-584123, State: Karnataka Editor: ANILKUMAR H